Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 30-11-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 30-11-2020 |
|---|---|
| Page No | 5 |

# ಕೋವಿಡ್: 374 ಮಂದಿ ಐಸಿಯುನಲ್ಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮರಣ ಪ್ರಕರಣಗಳ ಜತೆಗೆ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆಯೂ ಇಳಿಮುಖ ಕಂಡಿದ್ದು, ಸದ್ಯ 374 ಮಂದಿ ಐಸಿಯುನಲ್ಲಿದ್ದಾರೆ.

ರಾಜ್ಯದಲ್ಲಿ ಭಾನುವಾರ 1,291 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಸೋಂಕಿಗೀಡಾದವರ ಒಟ್ಟು ಸಂಖ್ಯೆ 8.83 ಲಕ್ಷಕ್ಕೆ ಏರಿಕೆಯಾಗಿದೆ. ಈ ತಿಂಗಳು 29 ದಿನಗಳ ಅವಧಿಯಲ್ಲಿ 60,487 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಈ ಅವಧಿಯಲ್ಲಿ ಪ್ರತಿನಿತ್ಯ ಸರಾಸರಿ 2,085 ಮಂದಿ ಸೋಂಕಿತರಾಗಿದ್ದಾರೆ. ಕೋವಿಡ್ ಪೀಡಿತರಲ್ಲಿ ಮತ್ತೆ 15 ಮಂದಿ ಮೃತಪಟ್ಟಿದ್ದು, ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 11,765ಕ್ಕೆ ಏರಿಕೆಯಾಗಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 723 ಮಂದಿ ಸೇರಿದಂತೆ ರಾಜ್ಯದಲ್ಲಿ 1,530 ಮಂದಿಗೆ ಕಾಯಿಲೆ ವಾಸಿಯಾಗಿದೆ. ಇದರಿಂದಾಗಿ ಗುಣಮುಖರ ಸಂಖ್ಯೆ 8.47 ಲಕ್ಷಕ್ಕೆ ತಲುಪಿದೆ. ಸೋಂಕಿತರಲ್ಲಿ ಸದ್ಯ 24,503 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಒಂದೇ ದಿನ 1.05 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಈವರೆಗೆ 1.10 ಕೋಟಿ ಮಂದಿ ಕೋವಿಡ್ ಪರೀಕ್ಷೆಯನ್ನು ಮಾಡಿಸಿಕೊಂಡಿದ್ದಾರೆ.

ಬೆಂಗಳೂರಿನಲ್ಲಿ 686 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 3.69 ಲಕ್ಷ ದಾಟಿದೆ. ಮಂಡ್ಯ ಮತ್ತು ದಕ್ಷಿಣ ಕನ್ನಡದಲ್ಲಿ ಹೊಸದಾಗಿ ತಲಾ 48 ಪ್ರಕರಣಗಳು ಪತ್ತೆಯಾಗಿವೆ. ಹಾಸನ (41), ತುಮಕೂರು (39), ಉಡುಪಿ (38) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ.

ಕನ್ನಡಪ್ರಭ

| Date | 30-11-2020 |
| --- | --- |
| Page No | 2 |



# ನಗರದಲ್ಲಿ ಸೋಂಕಿತರ ಸಂಖ್ಯೆ ಮತ್ತಷ್ಟು ಇಳಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಭಾನುವಾರ 686 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 723 ಸೋಂಕಿತರು ಗುಣಮುಖರಾಗಿದ್ದಾರೆ. 10 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. ಈ ಮೂಲಕ ನಗರದ ಒಟ್ಟು ಸೋಂಕಿತರ ಸಂಖ್ಯೆ 3,69,290 ಕ್ಕೆ ಏರಿಕೆಯಾಗಿದ್ದು, ಒಟ್ಟು ಗುಣಮುಖರ ಸಂಖ್ಯೆ 3,46,839ಕ್ಕೆ ತಲುಪಿದೆ. ನಗರದಲ್ಲಿ ಇನ್ನೂ 18,319 ಸಕ್ರಿಯ ಪ್ರಕರಣಗಳಿದ್ದು, ಆಸ್ಪತ್ರೆ, ಆರೈಕೆ ಕೇಂದ್ರ ಹಾಗೂ ಹೋಂ ಐಸೋಲೇಷನ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇನ್ನು 184 ಸೋಂಕಿತರ ಆರೋಗ್ಯ ಪರಿಸ್ಥಿತಿ ಗಂಭೀರವಾಗಿದ್ದು, ನಗರದ ವಿವಿಧ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. ಭಾನುವಾರ 10 ಮಂದಿ ಸೋಂಕಿನಿಂದ ಮೃತಪಟ್ಟ ವರದಿಯಾಗಿದ್ದು, ಒಟ್ಟು ಮೃತರ ಸಂಖ್ಯೆ 4,131 ಏರಿಕೆಯಾಗಿದೆ.

ಕನ್ನಡಪ್ರಭ

| Date | 30-11-2020 |
|---|---|
| Page No | 2 |


# ಜನರೇ ಕೊರೆಯುವ ಚಳಿ ಬಗ್ಗೆ ಎಚ್ಚರ!

## ಸೈಕ್ಲೋನ್, ವಾಯುಭಾರ ಕುಸಿತದ ಪ್ರಭಾವ | ನಗರದಲ್ಲಿ ಮಳೆಯ ಜತೆಗೆ ಹೆಚ್ಚಾದ ಥಂಡಿ | ಹೀಗಾಗಿ ನೆಗಡಿ ಸಾಧ್ಯತೆ ಇದು ಕೊರೋನಾಗೂ ಕಾರಣ ಆಗಬಹುದು | ಆರೋಗ್ಯ ಬಗ್ಗೆ ಮುಂಜಾಗ್ರತಾ ಕ್ರಮ ಅನುಸರಿಸಲು ತಜ್ಞರ ಸಲಹೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಚಳಿಗಾಲದ ವೇಳೆಯಲ್ಲೇ ಎರಗಿರುವ ಚಂಡಮಾರುತ ಸೇರಿದಂತೆ ವಾತಾವರಣದಲ್ಲಿ ಉಂಟಾಗುತ್ತಿರುವ ನಿರಂತರ ಬದಲಾವಣೆಯಿಂದ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಕಳೆದ ಒಂದು ವಾರದಿಂದ ಮೋಡ ಕವಿದ ವಾತಾವರಣದ ಏರ್ಪಟ್ಟಿದೆ. ಜೊತೆಗೆ ತೇವಾಂಶ ಸಹಿತ ಗಾಳಿಯಿಂದಾಗಿ ಚಳಿ ಅನುಭವ ತೀವ್ರಗೊಂಡಿದ್ದು ದಿನದಿಂದ ದಿನಕ್ಕೆ ಚಳಿ ಮೈ ಕೊರೆಯುತ್ತಿದೆ.

-ಕೊರೋನಾ ಕಾಲದಲ್ಲಿನ ಈ ಚಳಿಯ ತೀವ್ರತೆಯು ಹಲವು ಅನಾರೋಗ್ಯ ಸಮಸ್ಯೆಗಳಿಗೂ ಎಡೆ ಮಾಡಿಕೊಡುವ ಸಾಧ್ಯತೆ ಇದೆ. ಹೀಗಾಗಿ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದು ಆರೋಗ್ಯ ತಜ್ಞರು ಎಚ್ಚರಿಸಿದ್ದಾರೆ.

ಬೆಂಗಳೂರು ಸೇರಿ ದಕ್ಷಿಣ ಒಳನಾಡಿನ ಮೇಲೆ ಹೆಚ್ಚು ಪ್ರಭಾವ ಬೀರುವ ಬಂಗಾಳಕೊಲ್ಲಿ ಭಾಗದಲ್ಲಿ ಮುಂಗಾರು ಆರಂಭದಿಂದಲೂ ನಿರಂತರವಾಗಿ ವಾಯುಭಾರ ಕುಸಿತ (ಸ್ಟ್ರೆಫ್) ಉಂಟಾಗುತ್ತಲೇ ಇದೆ. ಸಮುದ್ರದ ಮೇಲ್ಮೈ ಸುಳಿಗಾಳಿ ಹಾಗೂ ಅದರ ತೀವ್ರತೆಯಿಂದ ಹೆಚ್ಚು ಮಳೆ ಆಗಿದೆ. ಇದರ ಜೊತೆಗೆ ಬಂಗಾಳಕೊಲ್ಲಿ ಭಾಗದಿಂದ ತೇವಾಂಶ ಸಹಿತ ಮಾರುತಗಳು ತಮಿಳುನಾಡು ಮಾರ್ಗವಾಗಿ ರಾಜ್ಯದ ಮೇಲೆ ಬೀಸುತ್ತಿವೆ. ಇದರಿಂದ ಮಳೆಯ ಜೊತೆಗೆ ಚಳಿಯ ತೀವ್ರ ಅನುಭವವಾಗುತ್ತಿದೆ.

**ತಾಪಮಾನ ಇಳಿಕೆ:** ಹವಾಮಾನ ಬದಲಾವಣೆಗೆ ತಕ್ಕಂತೆ ನಗರದಲ್ಲಿ ತಾಪಮಾನ ಏರಿಳಿತ ಉಂಟಾಗುತ್ತಿದೆ. ನ.27ರಂದು ಹೆಚ್ಚು ಚಳಿ ಉಂಟಾಗಿದ್ದು ಅಂದು ತಾಪಮಾನ ಗರಿಷ್ಠ 20.7 ಮತ್ತು ಕನಿಷ್ಠ 17.3 ಡಿಗ್ರಿ ಸೆಲ್ಸಿಯಸ್‌ನಷ್ಟು ದಾಖಲಾಗಿತ್ತು. ನವೆಂಬರ್ 29ರವರೆಗೆ ಕ್ರಮೇಣ ಕಡಿಮೆಯಾಗುತ್ತಿದ್ದರೂ, ಚಳಿಯ ಪ್ರಭಾವ ಇನ್ನೂ ಕುಗ್ಗಿಲ್ಲ. ಡಿ.2ರ ವೇಳೆಗೆ ತುಸು ಕಡಿಮೆಯಾಗುವ ಲಕ್ಷಣಗಳಿವೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

**ಕೊರೋನಾ ಬಗ್ಗೆ ಎಚ್ಚರ:** ರಾಜ್ಯದಲ್ಲಿ ಈಗಷ್ಟೇ ಕೊರೋನಾ ಇಳಿಮುಖವಾಗುತ್ತಿದ್ದು ಇದು ಶೀತ ಮೂಲದ ಸೋಂಕಾಗಿರುವುದರಿಂದ ಚಳಿಗಾಲದಲ್ಲಿ ಎಚ್ಚರ ವಹಿಸಬೇಕು. ಜೊತೆಗೆ ಚಳಿಯಿಂದಾಗಿ ವಿಷಮಶೀತ ಜ್ವರ, ಅಸ್ತಮಾ ಹಾಗೂ ನ್ಯುಮೋನಿಯಾ ರೋಗಿಗಳಲ್ಲಿ ರೋಗ ಉಲ್ಬಣದಂತಹ ಸಮಸ್ಯೆಗಳು ಉಂಟಾಗಿ ರೋಗ ನಿರೋಧಕ ಶಕ್ತಿ ಕುಸಿಯುವ ಸಾಧ್ಯತೆ ಇದೆ. ಇದರಿಂದ ಕೊರೋನಾಗೆ ಸುಲಭ ತುತ್ತಾಗಲಿದ್ದಾರೆ. ಹಾಗಾಗಿ ಚಳಿಯ ಬಗ್ಗೆ ಕೊರೋನಾ ಕಾಲದಲ್ಲಿ ತೀವ್ರ ಮುನ್ನೆಚ್ಚರಿಕೆ ಅಗತ್ಯ ಎಂದು ಸರ್ಕಾರಿ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ। ಅನ್ಸರ್ ಅಹಮದ್ ಹೇಳುತ್ತಾರೆ.

### ಹೃದಯ ಆರೋಗ್ಯದ ಬಗ್ಗೆ ಎಚ್ಚರವಹಿಸಿ

'ಚಳಿ ಹೆಚ್ಚಿದ್ದಾಗ ತೀವ್ರ ಚಳಿಯಿಂದ ಹೃದಯದ ಅಪಧಮನಿಗಳು ಪೆಡಸಾಗುತ್ತವೆ. ಆಗ ರಕ್ತದೊತ್ತಡ ಮತ್ತು ಪ್ರೊಟೀನ್ ಪ್ರಮಾಣ ಹೆಚ್ಚಾಗಿ ರಕ್ತ ಹೆಪ್ಪುಗಟ್ಟುತ್ತದೆ. ಇದರಿಂದ ಹೃದಯಾಘಾತದಂಥ ಸಮಸ್ಯೆಗಳು ಎದುರಾಗುತ್ತವೆ. ಅಸ್ತಮಾ ರೋಗಿಗಳಿಗೂ ತೊಂದರೆ ಹೆಚ್ಚು. ಹೀಗಾಗಿ ರೋಗ ನಿರೋಧಕ ಶಕ್ತಿ ಕಡಿಮೆ ಇರುವ 60 ವರ್ಷ ಮೇಲ್ಪಟ್ಟವರು ಜೊತೆಗೆ ಆರು ವರ್ಷದ ಒಳಗಿನ ಮಕ್ಕಳು ವಿಶೇಷ ಕಾಳಜಿ ವಹಿಸಬೇಕು' ಎನ್ನುತ್ತಾರೆ ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಡಾ। ಸಿ.ಎನ್. ಮಂಜುನಾಥ್.



### ಬೆಳ್ಳಬೆಳಗ್ಗೆ, ಸಂಜೆ ವಾಕಿಂಗ್ ಬೇಡ

ಚಳಿಯ ವೇಳೆ ಹೃದಯಾಘಾತಗಳು ಹೆಚ್ಚಾಗುವುದರಿಂದ ಬೆಚ್ಚನೆಯ ವಾತಾವರಣ ಸೃಷ್ಟಿಸಿಕೊಳ್ಳಬೇಕು. ಮುಂಜಾಗ್ರತೆ ದೃಷ್ಟಿಯಿಂದ ಬೆಳಗಿನ ವಾಕಿಂಗ್, ಸಂಜೆ ಆರು ಗಂಟೆ ನಂತರ ಹೊರ ಹೋಗುವುದನ್ನು ಆದಷ್ಟೂ ನಿಲ್ಲಿಸಬೇಕು. ಆದಷ್ಟು ದೇಹ ಬಿಸಿಯಾಗಿರುವಂತೆ ನೋಡಿಕೊಳ್ಳಬೇಕು.

### ಹೊರಗಿನ ತಿಂಡಿ ತಿನ್ನಬೇಡಿ

ಹೊರಗಿನ ತಿಂಡಿ ತಿನಿಸು, ಎಣ್ಣೆ ಪದಾರ್ಥ ಹಾಗೂ ಮಾಂಸಹಾರ ಸೇವನೆ ಹೆಚ್ಚಾಗಿ ಮಾಡಬಾರದು. ರೋಗ ನಿರೋಧಕ ಶಕ್ತಿ ಹೆಚ್ಚಿಸಬಲ್ಲ ತರಕಾರಿಗಳು, ಹಣ್ಣು, ಕಾಳಿನ ಪದಾರ್ಥ ಸೇವಿಸಬೇಕು. ಬಿಸಿ ನೀರು ಕುಡಿಯುವುದನ್ನು ತಪ್ಪದೇ ರೂಢಿಸಿಕೊಳ್ಳಬೇಕು. ಇಲ್ಲದಿದ್ದರೆ ಅನಾರೋಗ್ಯಕ್ಕೆ ತುತ್ತಾಗುವ ಸಾಧ್ಯತೆ ಇದೆ ಎನ್ನುತ್ತಾರೆ ಅನ್ಸರ್ ಅಹಮದ್.

ಕನ್ನಡಪ್ರಭ

| Date | 30-11-2020 |
|---|---|
| Page No | 4 |


# ಕಟ್ಟಡ ನಕ್ಷೆ ಮಂಜೂರಾತಿ, ಅಭಿವೃದ್ಧಿ ಶುಲ್ಕ ಹೆಚ್ಚಳ: 100 ವಾರ್ಡ್‌ಗೆ ಹೊರೆ

## ಈಗಾಗಲೇ ಅಭಿವೃದ್ಧಿ ಹೊಂದಿರುವ ವಾರ್ಡ್ ನಿವಾಸಿಗಳೂ ಶುಲ್ಕ ಪಾವತಿ ಅನಿವಾರ್ಯ

## ನಿವೇಶನ ಅಭಿವೃದ್ಧಿ ಶುಲ್ಕದಲ್ಲೂ ಗೊಂದಲ | ಸ್ಪಷ್ಟನೆ ಕೋರಿ ಸರ್ಕಾರಕ್ಕೆ ಪಾಲಿಕೆ ಪತ್ರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದ ಕೇಂದ್ರ ಭಾಗದಲ್ಲಿ ಕಟ್ಟಡ ನಿರ್ಮಾಣಕ್ಕೂ ಮೆಟ್ರೋ, ನೀರು ಸರಬರಾಜು ಯೋಜನೆ ಹಾಗೂ ಇತರೆ ಅಭಿವೃದ್ಧಿ ಸೆಸ್ ಪಾವತಿಗೆ ಸಂಬಂಧಿಸಿದ ಗೊಂದಲಗಳಿಗೆ ಸ್ಪಷ್ಟನೆ ಕೋರಿ ಬಿಬಿಎಂಪಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ.



ಕರ್ನಾಟಕ ಯೋಜನಾ ಪ್ರಾಧಿಕಾರದ ಆದೇಶದ ಅನ್ವಯ ಬಿಬಿಎಂಪಿ ಕಳೆದ ಸೆಪ್ಟಂಬರ್‌ನಲ್ಲಿ ಪರಿಷ್ಕೃತ ದರ 2020ರ ಫೆ.25ರಿಂದಲೇ ಜಾರಿಗೆ ಬರುವಂತೆ ಕಟ್ಟಡ ನಕ್ಷೆ ಮಂಜೂರಾತಿ ಶುಲ್ಕ ಹಾಗೂ ಶೇ.0.8ರಷ್ಟು ಅಭಿವೃದ್ಧಿ ಶುಲ್ಕ ಏರಿಕೆ ಮಾಡಿ ಆದೇಶಿಸಲಾಗಿತ್ತು.

ಇದರಿಂದ ಈಗಾಗಲೇ ನೀರು ಸರಬರಾಜು ಯೋಜನೆ, ಮೆಟ್ರೋ ವ್ಯವಸ್ಥೆ, ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಹೊಂದಿರುವ ಬೆಂಗಳೂರಿನ ಕೇಂದ್ರ ಭಾಗದ (ಬಿಬಿಎಂಪಿ 100ಕ್ಕೂ ಹೆಚ್ಚು ವಾರ್ಡ್) ಸಾರ್ವಜನಿಕರೂ ಮತ್ತೆ ಹೊಸ ಅಭಿವೃದ್ಧಿ ಸೆಸ್ ಅನ್ನು ಪಾವತಿಸಬೇಕಾದ ಅನಿವಾರ್ಯತೆ ನಿರ್ಮಾಣಗೊಂಡಿದೆ. ಹಾಗಾಗಿ, ಈ ಬಗ್ಗೆ ಗೊಂದಲ ಸೃಷ್ಟಿಯಾಗಿದೆ.

ಇನ್ನು ನಿವೇಶನಕ್ಕಿಂತ ಕಡಿಮೆ ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಿಸಿದರೂ ಇಡೀ ನಿವೇಶನಕ್ಕೆ ಅಭಿವೃದ್ಧಿ ಶುಲ್ಕ ಪಾವತಿ ಮಾಡಬೇಕಾಗಿದೆ. ಇದರಿಂದ ಕಟ್ಟಡ ನಿರ್ಮಾಣ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಶುಲ್ಕದ ರೂಪದಲ್ಲಿ ಸರ್ಕಾರಕ್ಕೆ ಪಾವತಿ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಹಾಗಾಗಿ, ಈ ಬಗ್ಗೆ ಸ್ಪಷ್ಟನೆ ನೀಡುವಂತೆ ಬಿಬಿಎಂಪಿ ನಗರ ಯೋಜನಾ ವಿಭಾಗದಿಂದ ರಾಜ್ಯ ಸರ್ಕಾರಕ್ಕೆ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಬಿಬಿಎಂಪಿ ಯೋಜನಾ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬಿಬಿಎಂಪಿಯು ಕಳೆದ ಫೆಬ್ರವರಿಯಿಂದ ಜಾರಿಯಾಗುವಂತೆ ಆದೇಶಿಸಿದ್ದ ಪರಿಷ್ಕೃತ ದರದ ಅನ್ವಯ ನಕ್ಷೆ ಮಂಜೂರಾತಿಗೆ (ಒಂದು ಅಂತಸ್ತು) ಪ್ರತಿ ಚದರ ಮೀಟರ್‌ಗೆ ವಸತಿ ಕಟ್ಟಡ ಹಾಗೂ ಇತರೆ ಕಟ್ಟಡಗಳಿಗೆ ಶೇ.0.5ರಷ್ಟು ಶುಲ್ಕ ಹೆಚ್ಚಳವಾಗಿತ್ತು. ವಾಣಿಜ್ಯ ಕಟ್ಟಡಕ್ಕೆ ಶೇ.1.5ರಷ್ಟು ಹಾಗೂ ಕೈಗಾರಿಕೆ ಕಟ್ಟಡಗಳಿಗೆ ಶೇ.1ರಷ್ಟು ಏರಿಕೆ ಮಾಡಲಾಗಿತ್ತು.

ಇನ್ನು ಬಹು ಮಹಡಿ ಕಟ್ಟಡ ನಕ್ಷೆ ಮಂಜೂರಾತಿಗೆ ವಸತಿ ಕಟ್ಟಡ ಮತ್ತು ಇತರೆ ಕಟ್ಟಡಗಳಿಗೆ ಪ್ರತಿ ಚದರ ಮೀಟರ್‌ಗೆ ₹20, ಕೈಗಾರಿಕೆ ಕಟ್ಟಡಗಳಿಗೆ ₹40, ವಾಣಿಜ್ಯ ಕಟ್ಟಡಗಳಿಗೆ ₹100 ದರ ವಿಧಿಸಲಾಗಿತ್ತು.

ಇದರೊಂದಿಗೆ ಮೆಟ್ರೋ, ನೀರು ಸರಬರಾಜು ಯೋಜನೆ ಅಭಿವೃದ್ಧಿ, ರಿಂಗ್ ರಸ್ತೆ ಅಭಿವೃದ್ಧಿ, ಕೊಳಗೇರಿ ಪ್ರದೇಶ ಅಭಿವೃದ್ಧಿ ಹಾಗೂ ಬೃಹತ್ ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಸೆಸ್ ಶೇ.0.8 ರಷ್ಟು ಹೆಚ್ಚಳ ಮಾಡಿ ಸೆಪ್ಟಂಬರ್‌ನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಆದೇಶಿಸಿದ್ದರು.

VK ವಿಜಯ ಕರ್ನಾಟಕ

| Date | 30-11-2020 |
|---|---|
| Page No | 7 |


## ಸಂಪುಟ ಸಭೆಯ ನಿರ್ಧಾರದಿಂದ ಪಾಲಿಕೆ ಗಡಿಯ ಗ್ರಾಮಗಳ ಜನರು ನಿರಾಳ

# ಆಸ್ತಿ ಮೌಲ್ಯ ಹಿಗ್ಗಿಸಿದ ಬಿಬಿಎಂಪಿ ಸೇರ್ಪಡೆ


■ ನಾಗಪ್ಪ ನಾಗನಾಯಕನಹಳ್ಳಿ ಬೆಂಗಳೂರು
nagappa.narayanappa@timesgroup.com


ಅತ್ತ ಗ್ರಾಮ ಪಂಚಾಯಿತಿ, ಇತ್ತ ಬಿಬಿಎಂಪಿಯಿಂದ ಮೂಲ ಸೌಲಭ್ಯ ಸಿಗದೆ ತ್ರಿಶಂಕು ಸ್ಥಿತಿಯಲ್ಲಿದ್ದ ಗ್ರಾಮಗಳನ್ನು ಪಾಲಿಕೆಯ ತೆಕ್ಕೆಗೆ ಸೇರಿಸಲು ಸಚಿವ ಸಂಪುಟ ಸಭೆ ಕೈಗೊಂಡ ನಿರ್ಧಾರ ಗ್ರಾಮಗಳ ನಿವಾಸಿಗಳನ್ನು ನಿರಾಳರಾಗುವಂತೆ ಮಾಡಿದೆ. ಬಿಬಿಎಂಪಿ ಸೇರ್ಪಡೆ ಬೆನ್ನಲ್ಲೇ ಈಗ ಆಸ್ತಿಗಳ ಮೌಲ್ಯವೂ ಏರಿಕೆಯಾಗುವ ನಿರೀಕ್ಷೆ ಇದೆ.

ಯಶವಂತಪುರ ವಿಧಾನಸಭಾ ಕ್ಷೇತ್ರದ ಮಲ್ಲಸಂದ್ರ, ಉತ್ತರಹಳ್ಳಿ ಮನವರ್ತೆ ಕಾವಲ್, ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಲಕ್ಷ್ಮೀಪುರ, ಕಾನ್ಷಿರಾಮ್‌ನಗರ ಹಾಗೂ ಲಕ್ಷ್ಮೀಪುರ ಗ್ರಾಮದ ಬಡಾವಣೆಗಳ ಜನರಿಗೆ ಪಾಲಿಕೆ ಸೇರುವ ಕನಸು ಸಾಕಾರಗೊಂಡಿದೆ. ಬಿಬಿಎಂಪಿ ಒಡಲು ಸೇರುತ್ತಿರುವ ಕಾನ್ಷಿರಾಮ್‌ನಗರ, ಲಕ್ಷ್ಮೀಪುರ ಸುತ್ತಲಿನ ಬಡಾವಣೆಗಳದ್ದು ಒಂದು ಕತೆಯಾದರೆ, ಮಲ್ಲಸಂದ್ರ ಮತ್ತು ಉತ್ತರಹಳ್ಳಿ ಮನವರ್ತೆ ಕಾವಲ್‌ನಲ್ಲಿನ ನಿವಾಸಿಗಳದ್ದು ಮತ್ತೊಂದು ವ್ಯಥೆ. ಶೆಟ್ಟಿಹಳ್ಳಿ ವಾರ್ಡ್‌ನ ಮಗ್ಗುಲಲ್ಲೇ ಇದ್ದರೂ ಕಾನ್ಷಿರಾಮ್‌ನಗರ ಮತ್ತು ಲಕ್ಷ್ಮೀಪುರಕ್ಕೆ ಪಾಲಿಕೆಗೆ ಸೇರುವ ಭಾಗ್ಯ ದಕ್ಕಿರಲಿಲ್ಲ. ಹೀಗಾಗಿ, ಸಂಪೂರ್ಣ ನಗರೀಕರಣಗೊಂಡಿದ್ದ ಈ ಪ್ರದೇಶಗಳು ಸೋಮಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿಯಲ್ಲೇ ಉಳಿದುಕೊಂಡು, ಅಗತ್ಯ ಮೂಲಸೌಕರ್ಯಗಳಿಲ್ಲದೆ ಸೊರಗಿ ಹೋಗಿದ್ದವು.

**ಲಾಬಿಯೋ ಅಥವಾ ಪ್ರಮಾದವೋ?:** ರಾಜ್ಯ ಸರಕಾರವು ಮಲ್ಲಸಂದ್ರ, ಉತ್ತರಹಳ್ಳಿ ಮನವರ್ತೆ ಕಾವಲ್‌ನ ಭಾಗಶಃ ಪ್ರದೇಶಗಳು ಸೇರಿದಂತೆ ಒಟ್ಟು 111 ನಗರೀಕರಣಗೊಂಡ ಗ್ರಾಮಗಳನ್ನು ಬಿಬಿಎಂಪಿಗೆ ಸೇರಿಸಲು 2006ರ ನ. 2ರಂದು ಕರಡು ಅಧಿಸೂಚನೆ ಹೊರಡಿಸಿತು. ಆದರೆ, 2007ರ ಜ. 16 ರಂದು ಹೊರಡಿಸಿದ ಅಂತಿಮ ಅಧಿಸೂಚನೆಯಲ್ಲಿ ಮಲ್ಲಸಂದ್ರ ಹಾಗೂ ಮನವರ್ತೆ ಕಾವಲ್‌ನ ಅರ್ಧ ಭಾಗವನ್ನೂ ಕೈಬಿಡಲಾಗಿತ್ತು.

ತಲಘಟ್ಟಪುರ ಗ್ರಾಮ ಪಂಚಾಯಿತಿ ಅಧೀನದಲ್ಲಿದ್ದ ಎಲ್ಲ ಪ್ರದೇಶಗಳನ್ನು ಹೆಮ್ಮಿಗೆಪುರ ವಾರ್ಡ್‌ಗೆ ಸೇರ್ಪಡೆ ಮಾಡಲಾಯಿತು. ಆದರೆ, ಮಲ್ಲಸಂದ್ರ, ಉತ್ತರಹಳ್ಳಿ ಮನವರ್ತೆ ಕಾವಲ್‌ನ ಭಾಗಶಃ ಪ್ರದೇಶಗಳನ್ನು, ಸಂಬಂಧವೇ ಇಲ್ಲದ 10 ಕಿ.ಮೀ ದೂರದಲ್ಲಿರುವ ಕಗ್ಗಲೀಪುರ ಗ್ರಾಮ ಪಂಚಾಯಿತಿ ಮಡಿಲಿಗೆ ಹಾಕಲಾಗಿತ್ತು. ಈ ಗ್ರಾಮಗಳನ್ನು ಪಾಲಿಕೆಗೆ ಸೇರಿಸದಿರುವ ಕಾರಣವು ಇಂದಿಗೂ ನಿಗೂಢವಾಗಿಯೇ ಉಳಿದಿದೆ. ಈ ಪ್ರದೇಶಗಳು ಪಾಲಿಕೆ ತೆಕ್ಕೆ ಸೇರದಂತೆ ವ್ಯವಸ್ಥಿತ ಸಂಚು ರೂಪಿಸಿದ್ದರ ಹಿಂದೆ ಪ್ರಭಾವಿ ಬಿಲ್ಡರ್ಸ್ ಗಳ ಕೈವಾಡವಿತ್ತೆ ಎಂಬ ಶಂಕೆಯೂ ವ್ಯಕ್ತವಾಗಿದೆ.

ಬಿಬಿಎಂಪಿಗೆ 7 ನಗರಸಭೆ, ಒಂದು ಪುರಸಭೆ ಮತ್ತು 110 ಹಳ್ಳಿಗಳನ್ನು ಸೇರ್ಪಡೆ ಮಾಡಿದ ಸಂದರ್ಭದಲ್ಲಿ ಭೌಗೋಳಿಕವಾಗಿ 552 ಎಕರೆ ವಿಸ್ತೀರ್ಣರುವ ಮಲ್ಲಸಂದ್ರ ಮತ್ತು ನೈಸ್ ರಸ್ತೆಗೆ ಹೊಂದಿಕೊಂಡಿರುವ ಯು.ಎಂ.ಕಾವಲ್ ಪ್ರದೇಶಗಳಲ್ಲಿ ಗಗನ ಚುಂಬಿ ಅಪಾರ್ಟ್‌ಮೆಂಟ್‌ಗಳ ನಿರ್ಮಾಣ ಪರ್ವ ಶುರುವಾಗಿತ್ತು. ಪಾಲಿಕೆಗೆ ಸೇರಿದರೆ ಕಟ್ಟಡ ನಕ್ಷೆ ಮಂಜೂರಾತಿ, ಒಸಿ, ಸಿಸಿ ಶುಲ್ಕ ಮತ್ತು ಕೋಟ್ಯಂತರ ರೂ. ತೆರಿಗೆ ಪಾವತಿಸಬೇಕಾಗುತ್ತದೆ. ಅಲ್ಲದೇ ಅಧಿಕ ಅಂತಸ್ತುಗಳಿಗೆ ಅನುಮತಿ ಸಿಗುವುದಿಲ್ಲವೆಂಬ ಕಾರಣಕ್ಕೆ ರಿಯಲ್ ಎಸ್ಟೇಟ್ ಸಂಸ್ಥೆಗಳು, ಪ್ರಭಾವ ಬಳಸಿ ಈ ಎರಡೂ ಗ್ರಾಮಗಳು ಪಾಲಿಕೆಗೆ ಸೇರದಂತೆ ನೋಡಿಕೊಂಡಿವೆ ಎಂಬ ಆರೋಪ ಕೇಳಿಬಂದಿದೆ.

**ಪಾಲಿಕೆಯಲ್ಲಿಲ್ಲದ ಆಸ್ತಿಗಳಿಗೆ 'ಬಿ' ಖಾತೆ:** ತಲಘಟ್ಟಪುರ ಸಮೀಪದ ಉತ್ತರಹಳ್ಳಿ ಮನವರ್ತೆ ಕಾವಲ್‌ನಲ್ಲಿನ ಶೋಭಾ ಹಿಲ್‌ವ್ಯೂ, ಸನ್‌ಸ್ಕೇಪ್, ಸನ್ ಕ್ರೆಸ್ಟ್ ಅಪಾರ್ಟ್‌ಮೆಂಟ್‌ಗಳು ಹಾಗೂ ಸುತ್ತಮುತ್ತಲಿನ ನಿವಾಸಿಗಳಲ್ಲಿ ತಾವು ಪಾಲಿಕೆ ಅಥವಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದೇವೆಯೋ ಎಂಬ ಗೊಂದಲದಲ್ಲಿ ಮುಳುಗಿ ಹೋಗಿದ್ದರು. ಬಿಬಿಎಂಪಿ ರಚನೆಯಾದ ಬಳಿಕ 2010-11 ಮತ್ತು 2011-12ರಲ್ಲಿ ಫ್ಲ್ಯಾಟ್‌ಗಳನ್ನು ಖರೀದಿ ಮಾಡಿದ್ದವರು ಕಗ್ಗಲೀಪುರ ಗ್ರಾ.ಪಂಚಾಯಿತಿಯಲ್ಲೇ ಕಂದಾಯ ಕಟ್ಟಿದ್ದರು. ಆನಂತರ ಪಾಲಿಕೆಯಲ್ಲಿ ಆಸ್ತಿ ತೆರಿಗೆ ಪಾವತಿಸಲು ಶುರು ಮಾಡಿದರು.

»08




### ವ್ಯಾಪ್ತಿ ಗ್ರಾ.ಪಂ, ವೋಟು ಪಾಲಿಕೆಯಲ್ಲಿ!

ಮಲ್ಲಸಂದ್ರ ಮತ್ತು ಉತ್ತರಹಳ್ಳಿ ಮನವರ್ತೆ ಕಾವಲ್‌ನಲ್ಲಿನ ನಿವಾಸಿಗಳ ಹೆಸರುಗಳು ಗ್ರಾಮ ಪಂಚಾಯಿತಿ ಮತದಾರರ ಪಟ್ಟಿಯಲ್ಲಿಲ್ಲ. ಇವರು ಗ್ರಾ.ಪಂ, ತಾ.ಪಂ ಮತ್ತು ಜಿ.ಪಂ ಪಂಚಾಯಿತಿ ಚುನಾವಣೆಯಲ್ಲಿ ಮತವನ್ನೇ ಚಲಾಯಿಸಿಲ್ಲ. ಬದಲಿಗೆ ಇವರ ಹೆಸರುಗಳು ಪಾಲಿಕೆಯ ಹೆಮ್ಮಿಗೆಪುರ ವಾರ್ಡ್‌ನ ಮತದಾರರ ಪಟ್ಟಿಯಲ್ಲಿದ್ದು, ಪ್ರತಿ ಚುನಾವಣೆಯಲ್ಲಿ ಇಲ್ಲಿಯೇ ಮತ ಹಾಕುತ್ತಿದ್ದಾರೆ.

ಉತ್ತರಹಳ್ಳಿ ಮನವರ್ತೆ ಕಾವಲ್‌ನಲ್ಲಿ ಬೃಹತ್ ಅಪಾರ್ಟ್‌ಮೆಂಟ್‌ಗಳು ತಲೆ ಎತ್ತಿವೆ.

### ಮೂಲಸೌಕರ್ಯಕ್ಕೆ ಪರದಾಟ

ಮಲ್ಲಸಂದ್ರ ಗ್ರಾಮವು ಈಗಲೂ ಕಗ್ಗಲೀಪುರ ಗ್ರಾಮ ಪಂಚಾಯಿತಿಯಲ್ಲಿಯೇ ಇದೆ. ಸ್ವತ್ತುಗಳ ಮಾಲೀಕರು ಅಲ್ಲಿಯೇ ಕಂದಾಯ ಕಟ್ಟುತ್ತಿದ್ದಾರೆ. ಆದರೆ, ಪಂಚಾಯಿತಿಯಿಂದ ಏನೇನೂ ಸೌಲಭ್ಯಗಳು ದೊರಕುತ್ತಿಲ್ಲ. ಕಸ ನಿರ್ವಹಣೆ, ಬೀದಿದೀಪ, ಚರಂಡಿ, ಒಳಚರಂಡಿ, ಕುಡಿಯುವ ನೀರಿಗಾಗಿ ಈ ಗ್ರಾಮದ ಜನರು ಪರಿತಪಿಸುವಂತಾಗಿದೆ. ಇ-ಖಾತೆ ಕೂಡ ಸಿಕ್ಕಿಲ್ಲ. ಈ ಗ್ರಾಮದಲ್ಲಿನ ಆಸ್ತಿಗಳ ಮಾಲೀಕರು ಈವರೆಗೆ 68.52 ಲಕ್ಷ ರೂ. ಕಂದಾಯ ಪಾವತಿಸಿದ್ದಾರೆ.

ಮಲ್ಲಸಂದ್ರ ಗ್ರಾಮದಲ್ಲಿ ಈಗಾಗಲೇ ಹಲವು ಅಪಾರ್ಟ್‌ಮೆಂಟ್‌ಗಳು, ಶಿಕ್ಷಣ ಸಂಸ್ಥೆಗಳು ತಲೆ ಎತ್ತಿವೆ. ಹಲವು ವಸತಿ ಸಮುಚ್ಚಯಗಳು ನಿರ್ಮಾಣ ಹಂತದಲ್ಲಿವೆ. ಗೋದ್ರೇಜ್, ಸುರಭಿ, ಸಲಾರ್‌ಪುರಿಯಾ ಸತ್ವ, ಶ್ರೀರಾಮ್ ಸಿಂಫೋನಿ, ಪೂರ್ವಾಂಕರ ಹೈಲ್ಯಾಂಡ್ಸ್, ಪ್ರಾವಿಡೆಂಟ್ ಸೇರಿದಂತೆ ಹಲವು ರಿಯಲ್ ಎಸ್ಟೇಟ್ ಸಂಸ್ಥೆಗಳು ಸಾವಿರಾರು ಫ್ಲ್ಯಾಟ್‌ಗಳನ್ನು ನಿರ್ಮಿಸಿವೆ. ಈ ಗ್ರಾಮವು ಪಾಲಿಕೆಗೆ ಸೇರ್ಪಡೆಯಾಗುವುದರಿಂದ ನಿವೇಶನಗಳು, ಫ್ಲ್ಯಾಟ್‌ಗಳ ಮೌಲ್ಯವು ಜಾಸ್ತಿಯಾಗಲಿದೆ.

"ಪಾಲಿಕೆಗೆ ಸೇರಿಸುವಂತೆ ಹಲವು ವರ್ಷಗಳಿಂದ ಹೋರಾಟ ನಡೆಸಿದೆವು. ಇದೀಗ ಶಾಸಕ, ಸಚಿವ ಎಸ್.ಟಿ.ಸೋಮಶೇಖರ್ ಅವರ ಪ್ರಯತ್ನದಿಂದ ಮಲ್ಲಸಂದ್ರ ಪಾಲಿಕೆಗೆ ಸೇರ್ಪಡೆಗೊಂಡಿದೆ," ಎಂದು ಶ್ರೀರಾಮ್ ಸಿಂಫೋನಿ ಅಪಾರ್ಟ್‌ಮೆಂಟ್‌ನ ಪ್ರೊ. ಸತ್ಯನಾರಾಯಣ, ಶ್ರೀರಾಮ್ ಬಾಲಸುಬ್ರಮಣ್ಯ ತಿಳಿಸಿದರು.

ವಿಜಯ ಕರ್ನಾಟಕ

| Date | 30-11-2020 |
| --- | --- |
| Page No | 7 |

# ನಗರದಲ್ಲಿ 686 ಜನರಿಗೆ ಕೊರೊನಾ ಸೋಂಕು

**ಬೆಂಗಳೂರು:** ನಗರದಲ್ಲಿ ಭಾನುವಾರ ಹೊಸದಾಗಿ 686 ಕೊರೊನಾ ಸೋಂಕಿನ ಪ್ರಕರಣಗಳು ಕಂಡು ಬಂದಿವೆ. 10 ಮಂದಿ ಮೃತಪಟ್ಟಿದ್ದಾರೆ. ಸೋಂಕಿನಿಂದ ಮುಕ್ತರಾಗಿ ನಾನಾ ಆಸ್ಪತ್ರೆಗಳಿಂದ 723 ಮಂದಿ ಬಿಡುಗಡೆಗೊಂಡಿದ್ದು, ಇದುವರೆಗೆ ಬಿಡುಗಡೆಗೊಂಡವರ ಸಂಖ್ಯೆ 3,46,839ಕ್ಕೇರಿದೆ. ಪ್ರಸ್ತುತ, 18,319 ಸಕ್ರಿಯ ಪ್ರಕರಣಗಳಿದ್ದು, ಒಟ್ಟು ಪ್ರಕರಣಗಳ ಸಂಖ್ಯೆ 3,69,290 ದಾಟಿದೆ. ಇದುವರೆಗೆ ಸೋಂಕಿನಿಂದ ಒಟ್ಟು 4,131 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

VK ವಿಜಯ ಕರ್ನಾಟಕ

| Date | 30-11-2020 |
| --- | --- |
| Page No | 8 |


# ಆಸ್ತಿ ಮೌಲ್ಯ ಹಿಗ್ಗಿಸಿದ ಬಿಬಿಎಂಪಿ ಸೇರ್ಪಡೆ

» ನಮ್ಮ ಮೊದಲ ಪುಟದಿಂದ

ಆಸ್ತಿ ತೆರಿಗೆ ಪಾವತಿಸದ ನಿವಾಸಿಗಳಿಗೆ ನೋಟಿಸ್ ಜಾರಿ ಮಾಡುತ್ತಿದ್ದ ಪಾಲಿಕೆಯು, 'ಎ' ಖಾತಾ ಕೇಳಿದವರಿಗೆ 'ನೀವಿರುವ ಪ್ರದೇಶ ಪಾಲಿಕೆ ವ್ಯಾಪ್ತಿಗೆ ಬರುವುದಿಲ್ಲ, ಕಗ್ಗಲೀಪುರ ಗ್ರಾ.ಪಂ ವ್ಯಾಪ್ತಿಗೆ ಬರುತ್ತದೆ' ಎಂಬ ಉತ್ತರ ಅಧಿಕಾರಿಗಳಿಂದ ಬರುತ್ತಿದೆ. ಹೀಗಾಗಿ, ಬಹುತೇಕರು ಖಾತಾ ನೀಡದ ಹೊರತು ಆಸ್ತಿ ತೆರಿಗೆ ಕಟ್ಟುವುದಿಲ್ಲವೆಂದು ಹೋರಾಟ ನಡೆಸುತ್ತಿದ್ದಾರೆ. ಪಾಲಿಕೆ ಅಧೀನಕ್ಕೆ ಬಾರದ ಈ ಅಪಾರ್ಟ್‌ಮೆಂಟ್‌ನಲ್ಲಿನ ಹಲವು ಫ್ಲ್ಯಾಟ್‌ಗಳಿಗೆ 'ಬಿ' ಖಾತಾ ಹೇಗೆ ನೀಡಲಾಯಿತು ಎಂಬ ವಿಚಾರವು ಕುತೂಹಲ ಮೂಡಿಸಿದೆ. ಅಧಿಕಾರಿಗಳು ಲಂಚ ಪಡೆದು ನಕಲಿ 'ಬಿ' ಖಾತಾ ನೀಡಿದ್ದಾರೆ ಎಂಬ ಆರೋಪವಿದೆ.

"2016ರ ನವೆಂಬರ್‌ನಲ್ಲಿ ಪಾಲಿಕೆಯ ಕಂದಾಯ ವಿಭಾಗದ ಅಧಿಕಾರಿಗಳು ಖಾತಾ ಮೇಳ ನಡೆಸಿ, ಅರ್ಜಿಗಳನ್ನು ಸ್ವೀಕರಿಸಿದ್ದರು. ಬಳಿಕ ಈ ಪ್ರದೇಶವು ಪಾಲಿಕೆಗೆ ಸೇರುವುದಿಲ್ಲವೆಂದು ಖಾತಾ ವಿತರಣೆ ತಡೆ ಹಿಡಿದರು. ಅಲ್ಲಿಂದ ಪಾಲಿಕೆಗೆ ಸೇರಿಸಬೇಕೆಂಬ ಹೋರಾಟ ಶುರು ಮಾಡಿದೆವು. ತೆರಿಗೆಯನ್ನಷ್ಟೇ ಕಟ್ಟಿಸಿಕೊಳ್ಳುವ ಪಾಲಿಕೆಯು ರಸ್ತೆ, ಬೀದಿದೀಪ ಸೇರಿದಂತೆ ಯಾವುದೇ ಮೂಲಸೌಕರ್ಯ ಕಲ್ಪಿಸುತ್ತಿಲ್ಲ. ಅತ್ತ ಗ್ರಾ.ಪಂ, ಇತ್ತ ಪಾಲಿಕೆಗೂ ಸೇರದ ಪ್ರದೇಶದಲ್ಲಿರುವ ನಾವು ಸೌಲಭ್ಯಕ್ಕಾಗಿ ಬೇಡುವ ಪರಿಸ್ಥಿತಿ ನಿರ್ಮಾಣವಾಗಿತ್ತು," ಎಂದು ಶೋಭಾ ಸನ್‌ಕ್ರೆಸ್ಟ್‌ನ ನಿವಾಸಿ ವಾಣಿ ಅಳಲು ತೋಡಿಕೊಂಡರು.

"ಅಧಿಕೃತ ದಾಖಲೆಗಳಲ್ಲಿ ಪಾಲಿಕೆ ಅಧೀನದಲ್ಲಿಲ್ಲದ್ದರೂ 2018ರವರೆಗೆ ತೆರಿಗೆ ಪಾವತಿಸಲಾಗಿದೆ. ಆದರೆ, ಪಾಲಿಕೆಯಿಂದ ಯಾವುದೇ ಮೂಲ ಸೌಕರ್ಯ ಕಲ್ಪಿಸಿಲ್ಲ. ಹೀಗಾಗಿ, ಕೆಲವರು ತೆರಿಗೆ ಪಾವತಿ ಮಾಡುತ್ತಿಲ್ಲ. 'ಎ' ಖಾತಾ ನೀಡಲು ಅಧಿಕಾರಿಗಳು ನಿರಾಕರಿಸಿದಂದಿನಿಂದಲೇ ಪಾಲಿಕೆಗೆ ಸೇರಿಸುವಂತೆ ಹೋರಾಟ ಆರಂಭಿಸಿದೆವು. ಈಗ ಹೋರಾಟಕ್ಕೆ ಫಲ ಸಿಕ್ಕಿದೆ," ಎಂದು ಶೋಭಾ ಹಿಲ್‌ವ್ಯೂ ಅಪಾರ್ಟ್‌ನಿವಾಸಿಗಳ ಸಂಘದ ಸದಸ್ಯರಾದ ಸುಬ್ರಮಣ್ಯ ಪೊಡಿಪಾಡಿ ಮತ್ತು ಚೈತನ್ಯಾ ಸುಬ್ರಮಣ್ಯ 'ವಿಜಯ ಕರ್ನಾಟಕ' ಬಳಿ ಸಂತಸ ಹಂಚಿಕೊಂಡರು.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 30-11-2020 |
| --- | --- |
| Page No | 2 |

## 21,653 ಕೋಟಿ ರೂ. ಅನುಮೋದನೆ | ಖರ್ಚಾಗಿದ್ದು 10,018 ಕೋಟಿ ರೂ.ಗಳು!

# ಶೇ.50 ಸಹ ಅನುಷ್ಠಾನವಾಗದ ಯೋಜನೆಗಳು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

'ಬಾಯಿ ಬಡಾಯಿ, ಜೇಬು ಮಾತ್ರ ಖಾಲಿ' ಎಂಬ ಮಾತು ಬಿಬಿಎಂಪಿಗೆ ಸರಿಯಾಗಿ ಒಪ್ಪುತ್ತದೆ. ಹಿಂದಿನ 5 ವರ್ಷಗಳ ಕಾಲ ಆಡಳಿತ ಮಾಡಿದ ಜನಪ್ರತಿನಿಧಿಗಳು ಘೋಷಿಸಿದ ಯೋಜನೆಗಳ ಪೈಕಿ ಶೇ. 50 ಅನುಷ್ಠಾನಗೊಂಡಿಲ್ಲ.

ಪಾಲಿಕೆ ಮಂಡಿಸಿದ ಬಜೆಟ್‌ನಲ್ಲಿ ಸಾವಿರಾರು ಕೋಟಿ ರೂ. ಮೊತ್ತದ ಯೋಜನೆಗಳು ಘೋಷಣೆಯಾಗಿವೆ. ಅದರಲ್ಲೂ ವಾರ್ಡ್‌ವಾರು ಅನುಷ್ಠಾನಗೊಳಿಸುವ ಮೂಲಸೌಕರ್ಯಕ್ಕೆ ಬಹುಪಾಲು ಹಣ ಮೀಸಲಿಡಲಾಗಿತ್ತು. ಆದರೆ, ಅವುಗಳಲ್ಲಿ ಅರ್ಧಕ್ಕರ್ಧ ಕಾರ್ಯಗತವಾಗಿಲ್ಲ.

**» ಬೆಂಗಳೂರು ನವನಿರ್ಮಾಣ ಪಕ್ಷದಿಂದ ಬಹಿರಂಗ**

ಬೆಂಗಳೂರು ನವನಿರ್ಮಾಣ ಪಕ್ಷ ದಾಖಲೆಗಳನ್ನು ಒಟ್ಟುಗೂಡಿಸಿ ಕಳೆದ 5 ವರ್ಷಗಳ ಯೋಜನೆಗಳ ಬಗ್ಗೆ ಮಾಹಿತಿ ಪ್ರಕಟಿಸಿದೆ. ಆ ಪ್ರಕಾರ, 5 ವರ್ಷಗಳಲ್ಲಿ 198 ವಾರ್ಡ್‌ಗಳಲ್ಲಿ 63,629 ಯೋಜನೆಗಳ ಅನುಷ್ಠಾನಕ್ಕೆ ಅನುಮೋದನೆ ಮತ್ತು ಘೋಷಣೆ ದೊರೆತಿದೆ. ಅದಕ್ಕಾಗಿ ಮೀಸಲಿಟ್ಟ ಹಣ ಅಥವಾ ಅಷ್ಟು ಯೋಜನೆಗೆ ಮಾಡಬೇಕಿದ್ದ ಖರ್ಚಿನ ಮೊತ್ತ 21,653 ಕೋಟಿ ರೂ.ಗಳು. ಇದರಲ್ಲಿ ಖರ್ಚಾಗಿದ್ದು 10,018 ಕೋಟಿ ರೂ. ಮಾತ್ರ. ರಸ್ತೆ, ಚರಂಡಿಗಳ ದುರಸ್ತಿ, ಉದ್ಯಾನ ಅಭಿವೃದ್ಧಿ ಹೀಗೆ ಮೂಲಸೌಕರ್ಯ ಕಲ್ಪಿಸುವ ಯೋಜನೆಗಳೇ ಶೇ. 90 ಇವೆ.

**4ಜಿ ಹಗರಣ:** ಬೆಂಗಳೂರು ನವನಿರ್ಮಾಣ ಪಕ್ಷ ನೀಡಿರುವ ಮಾಹಿತಿ ಪ್ರಕಾರ, ಅನುಷ್ಠಾನಗೊಂಡ ಯೋಜನೆಗಳ ಪೈಕಿ ಶೇ. 47 ಯೋಜನೆಗಳು 4ಜಿ ನಿಯಮವನ್ನು ದುರುಪಯೋಗ ಮಾಡಿಕೊಂಡು ಟೆಂಡರ್ ಕರೆಯುವುದರಿಂದ ವಿನಾಯಿತಿ ಪಡೆದು ಕೆಆರ್‌ಐಡಿಎಲ್ ಡಿಸಿಎಲ್ ಸೇರಿ ಇನ್ನಿತರ ಸಂಸ್ಥೆಗಳಿಗೆ ಕಾಮಗಾರಿ ವಹಿಸಲಾಗಿದೆ. ಹೀಗೆ ನೀಡಲಾದ ಯೋಜನೆಗಳ ಮೊತ್ತ 4,721 ಕೋಟಿ ರೂ.ಗಳಾಗಿದೆ.

**ಕಳೆದ 5 ವರ್ಷಗಳಲ್ಲಿ ಮೀಸಲಿಟ್ಟ ಅನುದಾನ, ಸಿದ್ಧಪಡಿಸಲಾದ ಯೋಜನೆಗಳು ಹಾಗೂ ಅದರಲ್ಲಿ ಅನುಷ್ಠಾನಗೊಂಡ ಯೋಜನೆಗಳ ವಿವರದ ಪಟ್ಟಿ ಸಿದ್ಧಪಡಿಸಲಾಗಿದೆ. ಶೇ. 50 ಯೋಜನೆಗಳು ಅನುಷ್ಠಾನಗೊಂಡಿಲ್ಲ.**

| ಬಿ.ವಿ. ಲಲಿತಾಂಬ
ಬೆಂಗಳೂರು ನವನಿರ್ಮಾಣ ಪಕ್ಷದ ಪ್ರತಿನಿಧಿ

## ಪ್ರಶ್ನಿಸುತ್ತಿರುವ ಜನ

**ಬೆಂಗಳೂರು ನವನಿರ್ಮಾಣ ಪಕ್ಷ ವಾರ್ಡ್‌ಗಳಲ್ಲಿ ಕೈಗೊಂಡಿರುವ ಯೋಜನೆಗಳ ಕುರಿತ ಸಂಪೂರ್ಣ ಮಾಹಿತಿಯನ್ನು ತನ್ನ ವೆಬ್ ಸೈಟ್‌ನಲ್ಲಿ ಪ್ರಕಟಿಸಿದೆ. ಅದನ್ನಾಧರಿಸಿ ಇದೀಗ ಜನರು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳನ್ನು ಪ್ರಶ್ನಿಸಲು ಆರಂಭಿಸುತ್ತಿದ್ದಾರೆ. ಗೊಟ್ಟಿಗೆರೆ ವಾರ್ಡ್‌ನ ಸೌತ್ ಅವೆನ್ಯೂ ಲೇಔಟ್‌ನ ರಸ್ತೆ ದುರಸ್ತಿಗಾಗಿ 2019-20ನೇ ಸಾಲಿನಲ್ಲಿ 2 ಕೋಟಿ ರೂ. ಅನುದಾನ ಮೀಸಲಿಡಲಾಗಿತ್ತು. ಆದರೆ, ಯೋಜನೆ ಅನುಷ್ಠಾನಗೊಂಡಿಲ್ಲ. ಈ ಕುರಿತು ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆದ ಸ್ಥಳೀಯ ನಿವಾಸಿಗಳು, ಹಣ ಮೀಸಲಿಟ್ಟರೂ ಕೆಲಸ ಮಾಡದಿರುವ ಬಗ್ಗೆ ಸಂಬಂಧಪಟ್ಟವರ ಪ್ರಶ್ನಿಸುತ್ತಿದ್ದಾರೆ.**

ವಿಜಯವಾಣಿ
ಕನ್ನಡಿಗರ ಧ್ವನಿ

| | |
|---|---|
| Date | 30-11-2020 |
| Page No | 2 |


# ವಿಷ ಉಣಿಸಿ 4 ಬೀದಿನಾಯಿ ಕೊಂದರು!

**ಬೆಂಗಳೂರು:** ರಾಮಮೂರ್ತಿನಗರದ ಟಿ.ಸಿ. ಪಾಳ್ಯ ಮುಖ್ಯರಸ್ತೆ ಬಳಿ ಅಪರಿಚಿತರು ಬೀದಿ ನಾಯಿಗಳಿಗೆ ಊಟದಲ್ಲಿ ವಿಷ ಹಾಕಿ ವಿಕೃತಿ ಮೆರೆದಿದ್ದು, 4 ನಾಯಿಗಳು ಮೃತಪಟ್ಟಿವೆ. ತರುಣ್ ಎಂಬುವರು ನೀಡಿದ ದೂರಿನ ಆಧಾರದ ಮೇರೆಗೆ ರಾಮಮೂರ್ತಿನಗರ ಪೊಲೀಸರು ಎಫ್ಐಆರ್ ದಾಖಲಿಸಿಕೊಂಡಿದ್ದಾರೆ. ಸ್ಥಳೀಯ ಸಿಸಿ ಕ್ಯಾಮರಾ ಪರಿಶೀಲಿಸಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 30-11-2020 |
|---|---|
| Page No | 3 |

# ಶುಲ್ಕ ಹೆಚ್ಚಳ ಗೊಂದಲ

## ಸ್ಪಷ್ಟನೆ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿದ ಬಿಬಿಎಂಪಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನಗರದಲ್ಲಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿ ಶುಲ್ಕ ಹೆಚ್ಚಳ, ಶೇ.0.8 ಅಭಿವೃದ್ಧಿ ಶುಲ್ಕ ಏರಿಕೆ ಹಾಗೂ ಕೇಂದ್ರ ಭಾಗದ ಕಟ್ಟಡಗಳಿಗೆ ಮೆಟ್ರೋ, ರಿಂಗ್ ರಸ್ತೆ ಅಭಿವೃದ್ಧಿ ಸೆಸ್ ಜಾರಿಗೊಳಿಸುವ ಕುರಿತು ಗೊಂದಲಗಳಿಗೆ ಸ್ಪಷ್ಟನೆ ಕೋರಿ ಸರ್ಕಾರಕ್ಕೆ ಬಿಬಿಎಂಪಿ ಮನವಿ ಮಾಡಿದೆ.

ಕರ್ನಾಟಕ ಯೋಜನಾ ಪ್ರಾಧಿಕಾರದ ಆದೇಶದ ಅನ್ವಯ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಸೆಪ್ಟೆಂಬರ್‌ನಲ್ಲಿ ಪರಿಷ್ಕೃತ ದರ ಜಾರಿಗೊಳಿಸಿ 2020ರ ಫೆ. 25ರಿಂದಲೇ ಪೂರ್ವಾನ್ವಯವಾಗುವಂತೆ ಆದೇಶ ಹೊರಡಿಸಿತ್ತು. ಇದರಲ್ಲಿ ನಕ್ಷೆ ಮಂಜೂರಾತಿಗೆ (ಒಂದು ಅಂತಸ್ತು) ಪ್ರತಿ ಚ.ಮೀ. ವಸತಿ ಕಟ್ಟಡಕ್ಕೆ ಶೇ.0.5, ಕೈಗಾರಿಕೆ ಕಟ್ಟಡಗಳಿಗೆ ಶೇ.1 ಹಾಗೂ ವಾಣಿಜ್ಯ ಕಟ್ಟಡಕ್ಕೆ ಶೇ.1.5 ಶುಲ್ಕ ಹೆಚ್ಚಿಸಲಾಗಿತ್ತು. ಬಹುಮಹಡಿ ಕಟ್ಟಡ ನಕ್ಷೆ ಮಂಜೂರಾತಿಗೆ ಮತ್ತು ವಸತಿ ಸಂಕೀರ್ಣಗಳಿಗೆ ಪ್ರತಿ ಚ.ಮೀ.ಗೆ 20 ರೂ. ಕೈಗಾರಿಕೆ ಕಟ್ಟಡಗಳಿಗೆ 40 ರೂ. ಹಾಗೂ ವಾಣಿಜ್ಯ ಕಟ್ಟಡಗಳಿಗೆ 100 ರೂ. ದರ ವಿಧಿಸಲಾಗಿತ್ತು.

ನಗರದ ಕೇಂದ್ರಭಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ಮೆಟ್ರೋ, ನೀರು ಸರಬರಾಜು ಯೋಜನೆ, ರಿಂಗ್ ರಸ್ತೆ, ಕೊಳೆಗೇರಿ ಹಾಗೂ ಬೃಹತ್ ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಕರವನ್ನು ಶೇ.0.8 ಹೆಚ್ಚಿಸಲಾಗಿತ್ತು. ಆದರೆ, ಈಗಾಗಲೇ ಕೇಂದ್ರ ಭಾಗದ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯದ 100 ವಾರ್ಡ್‌ಗಳ ಜನರು ನೀರು ಸರಬರಾಜು ಯೋಜನೆ, ಮೆಟ್ರೋ ವ್ಯವಸ್ಥೆ, ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಕರ (ಸೆಸ್) ಪಾವತಿಸುತ್ತಿದ್ದಾರೆ. ಈ ಆದೇಶದಿಂದ ಮತ್ತೊಮ್ಮೆ ಹೊಸ ಅಭಿವೃದ್ಧಿ ಸೆಸ್ ಪಾವತಿಸಬೇಕೇ ಎಂಬ ಗೊಂದಲ ಸೃಷ್ಟಿಯಾಗಿದೆ.



### ನಿರ್ಮಾಣ ವೆಚ್ಚಕ್ಕಿಂತ ಹೆಚ್ಚು ಕರ

**ನಿವೇಶನಕ್ಕಿಂತ ಕಡಿಮೆ ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಿಸಿದರೂ ನಿವೇಶನದ ಆಧಾರದಲ್ಲಿ ಅಭಿವೃದ್ಧಿ ಕರ ಪಾವತಿಸಬೇಕಿದೆ. ಇದರಿಂದ ಕಟ್ಟಡ ನಿರ್ಮಾಣ ವೆಚ್ಚಕ್ಕಿಂತ ಹೆಚ್ಚು ಶುಲ್ಕವನ್ನು ಸರ್ಕಾರಕ್ಕೆ ಪಾವತಿಸಬೇಕಿದೆ. ಈ ಬಗ್ಗೆ ಕೂಡಲೇ ಸ್ಪಷ್ಟನೆ ನೀಡುವಂತೆ ಬಿಬಿಎಂಪಿ ನಗರ ಯೋಜನಾ ವಿಭಾಗದಿಂದ ರಾಜ್ಯ ಸರ್ಕಾರ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಪಾಲಿಕೆ ಯೋಜನಾ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.**

| Date | 30-11-2020 |
|---|---|
| Page No | 2 |

# ಗೊರಗುಂಟೆಪಾಳ್ಯದಲ್ಲಿ ಸಿಗ್ನಲ್ ಫ್ರೀ ರಸ್ತೆ

**ಬೆಂಗಳೂರು:** ರಾಜರಾಜೇಶ್ವರಿ ನಗರ ಸರ್ವಾಂಗೀಣ ಅಭಿವೃದ್ಧಿ ದೃಷ್ಟಿಯಿಂದ ಕ್ಷೇತ್ರ ವ್ಯಾಪ್ತಿಯ ಗೊರಗುಂಟೆಪಾಳ್ಯದಲ್ಲಿ ಕೆಳ ಹಾಗೂ ಮೇಲು ಸೇತುವೆ ನಿರ್ಮಿಸಿ ತುಮಕೂರು ರಸ್ತೆಯನ್ನು ಸಿಗ್ನಲ್ ಫ್ರೀಯಾಗಿಸುವ ಸಂಬಂಧ ಅಧಿಕಾರಿಗಳೊಂದಿಗೆ ಶಾಸಕ ಮುನಿರತ್ನ ಸ್ಥಳ ಪರಿಶೀಲನೆ ನಡೆಸಿದರು. ಬಳಿಕ ಮಾತನಾಡಿ, ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ದಿನೇದಿನೇ ವಾಹನ ದಟ್ಟಣೆ ವಿಪರೀತವಾಗುತ್ತಿದೆ. ಸಿಗ್ನಲ್ ದಾಟಿ ಸಾಗಲು ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಈ ಸಂಬಂಧ ಗೊರಗುಂಟೆಪಾಳ್ಯ ವೃತ್ತದಲ್ಲಿ ಸುಗಮ ಸಂಚಾರಕ್ಕೆ ಕೆಳ ಹಾಗೂ ಮೇಲು ಸೇತುವೆ ನಿರ್ಮಾಣದ ಬಗ್ಗೆ ಸಮಾಲೋಚನೆ ನಡೆಸಲಾಗಿದೆ ಎಂದರು.

| Date | 30-11-2020 |
|---|---|
| Page No | 2 |

# ಸಕಾಲ ಸಪ್ತಾಹ ಇಂದಿನಿಂದ

**ಬೆಂಗಳೂರು:** ಸಕಾಲ ಯೋಜನೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕರ್ನಾಟಕ ಸರಕಾರ ಸಕಾಲ ಸಪ್ತಾಹವನ್ನು ಆಯೋಜನೆ ಮಾಡಿದೆ. ನ.30 ರಿಂದ ಡಿ.19ರ ತನಕ ಸಪ್ತಾಹ ರಾಜ್ಯಾದ್ಯಂತ ನಡೆಯಲಿದೆ. ಜನರಿಗೆ ನಿಗದಿತ ಕಾಲ ಮಿತಿಯಲ್ಲಿ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಸಕಾಲ ಯೋಜನೆಯನ್ನು ಜಾರಿಗೆ ತರಲಾಗಿದೆ. ವಿವಿಧ ಇಲಾಖೆಗಳಲ್ಲಿ ಬಾಕಿ ಉಳಿದಿರುವ ಸಕಾಲ ಅರ್ಜಿಗಳು ಹಾಗೂ ಮೇಲ್ಮನವಿಗಳನ್ನು ತ್ವರಿತ ವಿಲೇವಾರಿಗಾಗಿ ಸಪ್ತಾಹ ಕೈಗೊಳ್ಳಲಾಗಿದೆ. ನ.30ರಿಂದ ಡಿ.5ರ ತನಕ ಕಂದಾಯ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಹಾಗೂ ಸಾರಿಗೆ ಇಲಾಖೆ ಒಳಗೊಂಡಂತೆ 4 ಇಲಾಖೆಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಲೇವಾರಿ ನಡೆಯಲಿದೆ. ಡಿ.7ರಿಂದ 11ರವರೆಗೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಪ್ರಕರಣಗಳ ವಿಲೇವಾರಿ ಹಾಗೂ ಡಿ.14 ರಿಂದ 19ರವರೆಗೆ ಸಕಾಲ ವ್ಯಾಪ್ತಿಗೆ ಒಳಪಡುವ ಉಳಿದ ಎಲ್ಲ ಸರಕಾರಿ ಇಲಾಖೆಗಳ ಪ್ರಕರಣಗಳ ಅರ್ಜಿ ವಿಲೇವಾರಿ ನಡೆಯಲಿದೆ. ಸಪ್ತಾಹದಲ್ಲಿ ಹೊಸ ಅರ್ಜಿಗಳನ್ನು ಸಹ ಸ್ವೀಕಾರ ಮಾಡಲಾಗುತ್ತದೆ. ಅವಧಿ ಮೀರಿ ಬಾಕಿ ಉಳಿಸಿಕೊಂಡ ಅರ್ಜಿಗಳ ವಿಲೇವಾರಿ ಮಾಡುವುದು ಸಹ ಸೇರಿದೆ.

## ಅರ್ಜಿಗಳನು ಸಕಾಲದಡಿಯಲ್ಲಿಯೇ ನೋಂದಾಯಿಸಿ

ಮೇಲ್ಮನವಿಗಳನ್ನು ಇತ್ಯರ್ಥಪಡಿಸಬೇಕು, ಅರ್ಜಿಗಳ ವಿಲೇವಾರಿ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು, ಸಾರ್ವಜನಿಕರಿಂದ ಬರುವ ಅರ್ಜಿಗಳನ್ನು ಸಕಾಲದಡಿಯಲ್ಲಿಯೇ ನೋಂದಾಯಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ. ಹೊಸದಾಗಿ ಸ್ವೀಕರಿಸಿದ ಅರ್ಜಿಗಳನ್ನು ಈ ಸಪ್ತಾಹದಲ್ಲಿ ವಿಲೇವಾರಿ ಮಾಡಬೇಕು. ಪ್ರತಿ ಕಚೇರಿಯಲ್ಲಿ ಸಪ್ತಾಹದ ಬ್ಯಾನರ್ ಅಳವಡಿಸಬೇಕು. ಕಚೇರಿಯ ಪ್ರವೇಶ ದ್ವಾರದಲ್ಲಿ ಹೆಲ್ಪ್ ಡೆಸ್ಕ್ ಸ್ಥಾಪಿಸಿ, ಜನರಿಗೆ ಸಕಾಲ ಯೋಜನೆ ಕುರಿತು ಮಾಹಿತಿ ನೀಡಬೇಕು ಎಂದು ನಿರ್ದೇಶನ ನೀಡಲಾಗಿದೆ.

ಹೊಸ ಅರ್ಜಿಗಳ ಸ್ವೀಕಾರದ ಜತೆ ಬಾಕಿ ಉಳಿದಿರುವ ಅರ್ಜಿಗಳನ್ನು ಸಹ ವಿಲೇವಾರಿ ಮಾಡಲಾಗುತ್ತದೆ. ರಾಜ್ಯದ 98 ಇಲಾಖೆಗಳಲ್ಲಿನ 1025 ಸೇವೆಗಳನ್ನು ಸಕಾಲ ವ್ಯಾಪ್ತಿಗೆ ತರಲಾಗಿದೆ. ಸಾರ್ವಜನಿಕರಿಗೆ ಸಕಾಲ ಬಗೆಗೆ ಹೆಚ್ಚಿನ ಮಾಹಿತಿ ನೀಡಿ ಜಾಗೃತಿ ಮೂಡಿಸುವ ಉದ್ದೇಶವನ್ನು ಸಪ್ತಾಹದಲ್ಲಿ ಹೊಂದಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

| Date | 30-11-2020 |
|---|---|
| Page No | 2 |

28 ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಮರು ಸೋಂಕು ಪತ್ತೆ | ಎರಡನೇ ಬಾರಿ ಸೋಂಕಿತರಲ್ಲಿ ಹೊಸ ರೋಗಲಕ್ಷಣಗಳು

# ಗುಣಮುಖರಾಗಿದ್ದ 35 ಮಂದಿಗೆ ಮತ್ತೆ ಕರೋನಾ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಕರೋನಾ ಎರಡನೇ ಅಲೆ ಆರಂಭವಾಗಲಿದೆ ಎಂಬ ಆತಂಕ ಶುರುವಾಗಿರುವ ನಡುವಲ್ಲೇ ನಗರದಲ್ಲಿ ಮತ್ತೊಂದು ಆತಂಕ ಶುರುವಾಗಿದೆ. ಸೋಂಕಿನಿಂದ ಗುಣಮುಖರಾಗಿದ್ದ 35 ಮಂದಿಗೆ ಮತ್ತೆ ಮಹಾಮಾರಿ ವೈರಸ್ ವಕ್ಕರಿಸಿರುವುದು ವರದಿಯಾಗಿದೆ.

ನಗರದ 7 ಆಸ್ಪತ್ರೆಗಳಲ್ಲಿ 35 ಮಂದಿ ಕರೋನಾ ಮರು ಸೋಂಕಿಗೊಳಗಾಗಿದ್ದಾರೆ. ಬೆಂಗಳೂರಿನ 28 ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಏಳು ಅಧಿಕಾರಿಗಳು ಇದುವರೆಗೂ 35 ಮಂದಿಯಲ್ಲಿ ಮರು ಸೋಂಕು ಪತ್ತೆಯಾಗಿದೆ ಎಂದು ಹೇಳಿದ್ದಾರೆ. ಆದರೆ, ಇನ್ನುಳಿದ 17 ಆಸ್ಪತ್ರೆಗಳಲ್ಲಿ ಮರುಸೋಂಕು ತಗುಲಿರುವ ಯಾವುದೇ ಪ್ರಕರಣ ಪತ್ತೆಯಾಗಿಲ್ಲ, ಆಸ್ಪತ್ರೆಗಳಲ್ಲಿ ಯಾವುದೇ ರೀತಿಯ ದಾಖಲೆಗಳು ಪತ್ತೆಯಾಗಿಲ್ಲ ಎಂದು ಹೇಳಲಾಗುತ್ತಿದೆ.



**ಆಕ್ಸಿಜನ್ ಮೇಲೆ ಹೆಚ್ಚಿನ ಅವಲಂಬಿತ:** ಜಯನಗರ ಜನರಲ್ ಆಸ್ಪತ್ರೆಯಲ್ಲಿ 10 ಮಂದಿಯಲ್ಲಿ ಮರುಸೋಂಕು ಪತ್ತೆಯಾಗಿರುವುದು ಕಂಡು ಬಂದಿದೆ. ಈಗಾಗಲೇ ಸೋಂಕಿನಿಂದ ಚೇತರಿಸಿ ಕೊಳ್ಳುತ್ತಿರುವ ವ್ಯಕ್ತಿಗೆ ಮರಳಿ ಸೋಂಕು ತಗುಲುವುದು ಅಪಾಯಕಾರಿಯಾಗಿರಲಿದ್ದು, ಇಂತಹ ವ್ಯಕ್ತಿಗಳು ಆಕ್ಸಿಜನ್ ಮೇಲೆ ಹೆಚ್ಚಿನ ಅವಲಂಬಿತ ವಾಗಿರುವಂತಾಗುತ್ತದೆ ಎಂದು ವೈದ್ಯರು ತಿಳಿಸಿದ್ದಾರೆ.

ಇಂತಹ ರೋಗಿಗಳನ್ನು ರಾಜೀವ್ ಗಾಂಧಿ ಇನ್ಸ್ಟಿಟ್ಯೂಟ್ ಆಫ್ ಎದೆರೋಗ ಆಸ್ಪತ್ರೆಗೆ ದಾಖಲಾಗುವಂತೆ ಶಿಫಾರಸು ಮಾಡಲಾಗುತ್ತಿದೆ ಎಂದು ತಿಳಿದುಬಂದಿದೆ. ಮರಳಿ ಸೋಂಕು ತಗುಲಿ 7 ಮಂದಿ ಆಸ್ಪತ್ರೆಗೆ ದಾಖಲಾಗಿದ್ದರು. ಎರಡನೇ ಬಾರಿ ಸೋಂಕು ತಗುಲಿದವರಲ್ಲಿ ಹೊಸ ರೋಗಲಕ್ಷಣಗಳು ಪತ್ತೆಯಾಗಿವೆ. ಇಂತಹವರಿಗೂ ಮೊದಲಿನಂತೆಯೇ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ. ಚಿಕಿತ್ಸೆಗೆ ಮರು ಸೋಂಕಿತರು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆಂದು ಮಣಿಪಾಲ್ ಆಸ್ಪತ್ರೆಯ ವೈದ್ಯ ಡಾ. ಸತೀಶ್ ಅವರು ಹೇಳಿದ್ದಾರೆ.

**ಚಿಕಿತ್ಸೆ ಅಸಮರ್ಪಕವಾಗಿದ್ದಾಗ ಮಾತ್ರ:** ಮೊದಲ ಬಾರಿಗೆ ಸೋಂಕು ತಗುಲಿದ ವ್ಯಕ್ತಿಗೆ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಚಿಕಿತ್ಸೆಗಳನ್ನು ನೀಡಿರುವು ದರಿಂದ 6 ತಿಂಗಳೊಳಗೆ ಮರು ಸೋಂಕು ತಗುಲುವುದು ವಿರಳವಾಗಿರುತ್ತದೆ. ಚಿಕಿತ್ಸೆ ಅಸಮರ್ಪಕವಾಗಿದ್ದಾಗ ಮಾತ್ರ ಮರು ಸೋಂಕು ತಗುಲುವ ಸಾಧ್ಯತೆಗಳಿರುತ್ತವೆ ಎಂದು ಹೇಳಲಾಗಿದೆ. ಜೀನೋಮಿಕ್ ಸ್ಟಡಿ ಮತ್ತು ವೈರಲ್ ಕಲ್ಚರಲ್ ಪರೀಕ್ಷೆಗಾಗಿ ಮಾದರಿಗಳನ್ನು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ವೈರಾಲಜಿ (ಪುಣೆ)ಗೆ ಕಳುಹಿಸಲಾಗಿದೆ. ಎರಡನೇ ಬಾರಿ ತಗುಲಿದ ಸೋಂಕು ಒಂದೇ ರೀತಿಯಲ್ಲಿಯೇ ಇರುತ್ತದೆಯೇ ಎಂಬುದನ್ನು ಪತ್ತೆಹಚ್ಚಲಾ ಗುತ್ತದೆ ಎಂದು ಡಾ. ನಾಗರಾಜ್ ಅವರು ಹೇಳಿದ್ದಾರೆ.

ಇನ್ನು ನಗರದ ಫೋರ್ಟಿಸ್ ಆಸ್ಪತ್ರೆಯಲ್ಲೂ ಮರು ಸೋಂಕು ತಗುಲಿರುವ ಒಂದು ಪ್ರಕರಣ ಪತ್ತೆಯಾಗಿದೆ. ರಾಮಯ್ಯ ಆಸ್ಪತ್ರೆಯಲ್ಲಿಯೂ ಮೂವರು ಆರೋಗ್ಯ ಕಾರ್ಯಕರ್ತರಲ್ಲಿ ಎರಡು ಬಾರಿ ಸೋಂಕು ಪತ್ತೆಯಾಗಿದೆ. ಆದರೆ, ಎರಡನೇ ಬಾರಿ ತಗುಲಿರುವ ಸೋಂಕು ಲಕ್ಷಣ ರಹಿತವಾಗಿದೆ ಎಂದು ಹೇಳಲಾಗುತ್ತಿದೆ. ಕ್ರಿಸ್ಟ್ ಲೈನ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ಮೂರು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ 5 ಮಂದಿಯಲ್ಲಿ ಮರು ಸೋಂಕು ಪತ್ತೆಯಾಗಿದೆ ಎಂದು ವರದಿಗಳು ತಿಳಿಸಿವೆ.

ಮರಣ ಪ್ರಮಾಣ ಶೇ.1.16 ಆಗಿದೆ. ಭಾನುವಾರ 13,223 ಆ್ಯಂಟಿಜೆನ್ ನಡೆಸಿದ್ದರೆ, 92,205 ಆರ್‌ಟಿಪಿಸಿಆರ್ ಟೆಸ್ಟ್ ನಡೆಸಲಾಗಿದೆ. ಇದುವರೆಗೂ 1,10,20,300 ಪರೀಕ್ಷೆಗಳನ್ನು ನಡೆಸಲಾಗಿದೆ.

## ಮೂತ್ರಶಾಸ್ತ್ರತಜ್ಞರಿಗೆ ಸವಾಲಾದ ರೋಗಿಗಳ ಚಿಕಿತ್ಸೆ

ಬೆಂಗಳೂರು: ನವೆಂಬರ್ ತಿಂಗಳನ್ನು ಮೂತ್ರಕೋಶ ಜಾಗೃತಿಯನ್ನು ಮೂಡಿಸುವ ಮಾಸವಾಗಿ ಆಚರಿಸಲಾಗುತ್ತಿದ್ದು, ಸಂಕೀರ್ಣ ಮೂತ್ರಕೋಶ ಸಂಬಂಧಿ ಕಾಯಿಲೆಗಳನ್ನು ಹೊಂದಿದ ರೋಗಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ. ತಜ್ಞರು ಹೇಳುವಂತೆ ಈ ಪೈಕಿ ಬಹುತೇಕ ರೋಗಿಗಳು ಲಾಕ್‌ಡೌನ್ ಸಂದರ್ಭದಲ್ಲಿ ಕರೋನಾ ವೈರಸ್ ಸೋಂಕು ತಗುಲುವ ಭೀತಿಯಿಂದ ಅರ್ಧದಲ್ಲೇ ಚಿಕಿತ್ಸೆಯನ್ನು ಸ್ಥಗಿತಗೊಳಿಸಿದ್ದಾರೆ ಅಥವಾ ವಿಳಂಬವಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕರೋನಾ ವೈರಸ್ ಸಾಂಕ್ರಾಮಿಕದ ಕಾರಣದಿಂದ ರೋಗಿಗಳು ವೈದ್ಯಕೀಯ ನೆರವು ಪಡೆಯುವುದು ವಿಳಂಬವಾಗಿದ್ದು, ಈ ಕಾರಣದಿಂದ ಅವರ ಆರೋಗ್ಯ ಮತ್ತು ಜೀವಕ್ಕೂ ಅಪಾಯ ಎದುರಾಗಿದೆ. ಇಂಥ ರೋಗಿಗಳಿಗೆ ಚಿಕಿತ್ಸೆ ನೀಡುವುದು ಸವಾಲುದಾಯಕ ಎಂದು ರಾಜಾಜಿನಗರ ಕಿಡ್ನಿ ಸ್ಟೋನ್ ಕೇಂದ್ರದ ಮೂತ್ರಶಾಸ್ತ್ರತಜ್ಞ ಡಾ. ಸುನೀಲ್ ಗೌಡ ತಿಳಿಸಿದ್ದಾರೆ. ಲಾಕ್‌ಡೌನ್ ಅವಧಿಯಲ್ಲಿ ಆನ್‌ಲೈನ್ ಮೂಲಕ ವೈದ್ಯಕೀಯ ಸಲಹೆ ನೀಡುವ ವೇಳೆ ಮೂತ್ರಕೋಶ ಸಂಬಂಧಿ ಸಮಸ್ಯೆಗಳನ್ನು ಹೊಂದಿರುವ ರೋಗಿಗಳಿಗೆ ಔಷಧಗಳನ್ನು ಶಿಫಾರಸು ಮಾಡುವ ಜತೆಗೆ ಆಹಾರ ಮತ್ತು ವ್ಯಾಯಾಮಕ್ಕೆ ಸಂಬಂಧಿಸಿ ದಂತೆ ಜೀವನಶೈಲಿ ಬದಲಾವಣೆಗಳನ್ನು ಮೂತ್ರಶಾಸ್ತ್ರ ತಜ್ಞರು ಸಲಹೆ ಮಾಡಿದ್ದರು. ಆದಾಗ್ಯೂ, ಶಸ್ತ್ರಚಿಕಿತ್ಸೆ ಅನಿವಾರ್ಯವಾಗಿದ್ದ ಕೆಲ ರೋಗಿಗಳ ಚಿಕಿತ್ಸೆ ವಿಳಂಬವಾಗಿದ್ದು, ಅವರು ಇದೀಗ ತಮ್ಮ ವೈದ್ಯರ ಬಳಿಗೆ ವೈದ್ಯಕೀಯ ಚಿಕಿತ್ಸೆಗಾಗಿ ಬರುತ್ತಿದ್ದಾರೆ. ಇಂಥ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವುದು ನಿಜಕ್ಕೂ ಸವಾಲುದಾಯಕವಾಗುತ್ತಿದೆ.

> ಮೂತ್ರಕೋಶದ ಕಲ್ಲನ್ನು ಹೊರತೆಗೆಯುವಂಥ ಸರಳ ಶಸ್ತ್ರಚಿಕಿತ್ಸೆಗಳನ್ನು ವಿಳಂಬ ಮಾಡುವುದು ಧೀರ್ಘಾವಧಿಯಲ್ಲಿ ಸಂಕೀರ್ಣ ಸಮಸ್ಯೆಗೆ ಕಾರಣವಾಗಬಹುದು. ಚಿಕಿತ್ಸೆಯನ್ನು ವಿಳಂಬ ಮಾಡುವುದು ಸರಿಯಾದ ಆಯ್ಕೆಯಲ್ಲ, ಆಸ್ಪತ್ರೆಗಳು ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದರ ಜತೆಗೆ ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಎಲ್ಲ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡು ರೋಗಿಗಳಿಗೆ ಸೋಂಕು ತಗುಲದಂತೆ ಎಚ್ಚರ ವಹಿಸಬೇಕು.
>
> **-ಹನುಮಂತ ರಾಜು**, ಕಿಡ್ನಿ ಸ್ಟೋನ್ ಕೇಂದ್ರದ ಮೂತ್ರಶಾಸ್ತ್ರ ತಜ್ಞ

ವಿಶ್ವವಾಣಿ

| Date | 30-11-2020 |
| --- | --- |
| Page No | 3 |

# ಚರ್ಚ್ ಸ್ಟ್ರೀಟ್‌ನಲ್ಲಿ ವಾರಾಂತ್ಯ ವಿಹಾರ

## ಸಂಚಾರ ದಟ್ಟಣೆ ರಗಳೆಯಿಲ್ಲದೆ ಜಾಲಿ ಮಾಡಿದ ಜನರು | ಖರೀದಿ ಖುಷಿ, ಮಸ್ತ್ ಫೋಟೊಶೂಟ್ ಮಜಾ



ಖರೀದಿಯಲ್ಲಿ ತೊಡಗಿರುವ ಯುವತಿಯರು.



ಸಾಕು ಪ್ರಾಣಿಯೊಂದಿಗೆ ವಾಯುವಿಹಾರ ಮಾಡುತ್ತಿರುವ ಮಹಿಳೆ.





ವಾಕಿಂಗ್‌ನಲ್ಲಿ ತೊಡಗಿರುವ ಮಾನಿನಿಯರು.

### ವಿವಿಧ ಚಟುವಟಿಕೆಯ ತಾಣ

ತಮ್ಮ ಸಾಕು ನಾಯಿ, ಬೆಕ್ಕುಗಳೊಂದಿಗೆ ಆಡ್ಡಾಡುತ್ತಾ ಸಮಯ ಕಳೆಯುತ್ತಿದ್ದರೆ, ಯುವಕರು ಹಲವರು ಸೈಕಲ್ ರೈಡಿಂಗ್, ಸುತ್ತಾಟಗಳಲ್ಲಿ ತೊಡಗಿದ್ದರೆ, ಇನ್ನೂ ಕೆಲವೆಡೆ ಮಹಿಳೆಯರು ತಮ್ಮದೇ ಆದ ಗುಂಪಿನೊಂದಿಗೆ ಹರಟೆಯಲ್ಲಿ ಮಗ್ನವಾದುದು ಸಾಮಾನ್ಯವಾಗಿತ್ತು. ಕೆಲವೆಡೆ ರಸ್ತೆ ಬದಿಯ ಆಹಾರ ಮಳಿಗೆಗಳು, ತಿಂಡಿ ಅಂಗಡಿಗಳು, ಮಕ್ಕಳಿಗಾಗಿ ಸಿಹಿತಿಂಡಿ, ಐಸ್ ಕ್ರೀಂ ಖರೀದಿಯಲ್ಲಿ ತೊಡಗಿದ್ದನ್ನು ಕಾಣಬಹುದಾಗಿತ್ತು.

ಸದಾ ಗಿಜಿಗುಡುವ ಜನ, ವಾಹನ ಸಂಚಾರ, ಮಾಲಿನ್ಯದ ಮಧ್ಯೆ ಆಗಾಗ ಈ ರೀತಿ ಕೆಲ ಸಮಯಗಳವರೆಗೆ ಸಂಚಾರ ನಿರ್ಬಂಧಿಸಿದರೆ ರಸ್ತೆ, ನಗರ ಸ್ವಚ್ಛವಾಗುತ್ತದೆ. ಅಲ್ಲದೇ ಸದಾ ಕೆಲಸ- ಕಾರ್ಯ ಎಂದು ಬ್ಯುಸಿಯಾಗಿರುವ ಜನರಿಗೆ ರಿಲಾಕ್ಸ್ ಆಗಲು ಇದು ಉತ್ತಮ ವ್ಯವಸ್ಥೆ.

- **ನಿಧಿ** ಸ್ಥಳೀಯ ಯುವತಿ

**ಅಪರ್ಣಾ ಎ.ಎಸ್.** ಬೆಂಗಳೂರು

ನಗರದ ಅತ್ಯಂತ ಜನಜಂಗುಳಿಯ ರಸ್ತೆ ಚರ್ಚ್‌ಸ್ಟ್ರೀಟ್ ವಾರಾಂತ್ಯದ ದಿನಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಿ ನಗರ ಭೂ ಸಾರಿಗೆ ನಿರ್ದೇಶನಾಲಯ ಆದೇಶ ಹೊರಡಿಸಿದ್ದು, ಮುಂದೆ 5 ತಿಂಗಳು ಚರ್ಚ್ ಸ್ಟ್ರೀಟ್‌ನಲ್ಲಿ ವಾರಾಂತ್ಯ ವಾಹನ ಸಂಚಾರ ಕಾಣಲಾಗುವುದಿಲ್ಲ.

ಬೆಂಗಳೂರಿನಲ್ಲಿ ಮಾಲಿನ್ಯ ಹೆಚ್ಚುತ್ತಿದ್ದು, ಅದನ್ನು ತಡೆದು ಪರಿಸರ ಸ್ನೇಹಿ ಕ್ರಮಗಳನ್ನು ಅನುಷ್ಠಾನಕ್ಕೆ ತರಲು ನಗರ ಭೂ ಸಾರಿಗೆ ನಿರ್ದೇಶನಾಲಯವು ಕ್ಯಾಟಪುಲ್ಟ್ ಯು.ಕೆ. ಸಹಯೋಗದಲ್ಲಿ ಶುದ್ಧ ಗಾಳಿಯಲ್ಲಿ ಜನರ ಓಡಾಟಕ್ಕೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಹಾಗೂ ನಡಿಗೆ, ಓಟ ಹಾಗೂ ಸೈಕ್ಲಿಂಗ್ ಅನ್ನು ಉತ್ತೇಜಿಸುವ ಸಲುವಾಗಿ ಹಾಗೂ ಆರೋಗ್ಯದ ನಿಮಿತ್ತ ಮತ್ತು ವಾಯುಮಾಲಿನ್ಯದ ನಿಯಂತ್ರಣಕ್ಕಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ ಈಗಾಗಲೇ ಚಾಲ್ತಿಯಲ್ಲಿರುವಂತೆ ಈ ಯೋಜನೆ ಜಾರಿಗೆ ತಂದಿದ್ದು, ಇದರಿಂದ ಚರ್ಚ್ ಸ್ಟ್ರೀಟ್‌ನಲ್ಲಿ ವಾರಾಂತ್ಯಗಳಲ್ಲಿ ವಾಹನಗಳ ಅಬ್ಬರದ ಬದಲಾಗಿ ಸಂಗೀತ, ಮಕ್ಕಳ ಆಟ- ಓಡಾಟ ಹಾಗೂ ಮಾತಿನ ಮೋಡಿ ಮಾತ್ರ ಇರಲಿದೆ.

**ಕರವಸ್ತ್ರ, ಗೊಂಬೆಗಳ ಖರೀದಿ:** ಇನ್ನು ವಾರಾಂತ್ಯದ ಸಂದರ್ಭದಲ್ಲಿ ಮಕ್ಕಳು, ಹೆಂಗಳೆಯರು ಎನ್ನದ ಭೇದವಿಲ್ಲದೇ ಎಲ್ಲರೂ ಚರ್ಚ್‌ಸ್ಟ್ರೀಟ್‌ನಲ್ಲಿ ನೆರೆದಿದ್ದು, ರಸ್ತೆಯುದ್ದಕ್ಕೂ ತೆರೆಯಲಾಗಿದ್ದ ಅಂಗಡಿಗಳಲ್ಲಿ ಯುವತಿಯರು ಬಣ್ಣ ಬಣ್ಣದ ಕೀ ಬಂಚ್, ಕರವಸ್ತ್ರ ಗೊಂಬೆಗಳ ಖರೀದಿಯಲ್ಲಿ ತೊಡಗಿದ್ದರು. ಅನೇಕ ಕಡೆಗಳಲ್ಲಿ ಯುವಜೋಡಿಗಳು ತಮ್ಮ ಸೆಲ್ಫಿ ಕ್ರೇಜ್‌ಗೆ ತಕ್ಕಂತೆ ಅಲ್ಲಲ್ಲಿ ನಿಲ್ಲಿಸಲಾಗಿದ್ದ ಸೆಲ್ಫಿ ಬೋರ್ಡ್‌ಗಳಲ್ಲಿ ಸೆಲ್ಫಿ ತೆಗೆದುಕೊಳ್ಳುತ್ತಾ ಮೈಮರೆತಿದ್ದರೆ, ಹಲವು ಕಡೆಗಳಲ್ಲಿ ಮಹಿಳೆಯರು ವ್ಯಾಯಾಮ, ಜಾಗಿಂಗ್‌ಗಳಲ್ಲಿ ತೊಡಗಿದ್ದನ್ನು ಕಾಣಬಹುದಾಗಿತ್ತು.

ವಾರಾಂತ್ಯ ಆದುದರಿಂದ ವರ್ಕ್‌ಫ್ರಂ ಹೋಮ್ ಎಂದು ಕೆಲಸದ ದಣಿವನ್ನು ಕಳೆದುಕೊಳ್ಳಲು ಹಾಗೂ ಸ್ಟ್ರೆಸ್ ರಿಲೀಫ್‌ಗಾಗಿ ಮಹಿಳೆಯರು, ವೃದ್ಧರು ಎಲ್ಲರೂ ಸಂಚಾರ ಹೊರಟಿದ್ದು, ಪ್ರತಿದಿನ ವಾಹನಗಳ ಗದ್ದಲವಿದ್ದ ಚರ್ಚ್ ಸ್ಟ್ರೀಟ್‌ನಲ್ಲಿ ಈಗ ಎಲ್ಲರೂ ಸ್ವಚ್ಛಂದವಾಗಿ ತಿರುಗಾಡುತ್ತಿರುವುದನ್ನು ಕಾಣಬಹುದಾಗಿತ್ತು.

**5 ತಿಂಗಳ ಕಾಲ ವಾಹನ ನಿರ್ಬಂಧ:** ಸ್ವಚ್ಛ ವಾಯು ರಸ್ತೆ ಅಭಿಯಾನದ ಭಾಗವಾಗಿ ನಿರ್ದೇಶನಾಲಯ ಈ ಆದೇಶ ಜಾರಿಗೆ ತಂದಿದ್ದು, ನ.7ರಿಂದ ಫೆ.28, 2021ರವರೆಗೆ ವಾಹನ ಸಂಚಾರ ನಿಷೇಧ ಜಾರಿಯಲ್ಲಿರಲಿದೆ. ಬೆಳಗ್ಗೆ 10ರಿಂದ ಮಧ್ಯರಾತ್ರಿ 12ರವರೆಗೆ ಜನರ ಓಡಾಟಕ್ಕೆ ಮಾತ್ರ ಅವಕಾಶ ನೀಡಲಾಗುತ್ತದೆ. ಈ ಅವಧಿಯಲ್ಲಿ ಯಾವುದೇ ಮಾದರಿ ವಾಹನಗಳ ಸಂಚಾರಕ್ಕೆ ಅವಕಾಶ ಇರುವುದಿಲ್ಲ. ಚರ್ಚ್‌ಸ್ಟ್ರೀಟ್ ರಸ್ತೆಯ ನಿವಾಸಿಗಳಿಗೆ ರೆಸ್ಟ್ ಹೌಸ್ ರಸ್ತೆ ಮತ್ತು ಎಂ.ಜಿ.ರಸ್ತೆ ವೃತ್ತದ ಬಳಿ ಬ್ಯಾರಿಕೇಡ್ ಅಳವಡಿಸಿ ಪ್ರವೇಶಿಸಲು ಮತ್ತು ನಿರ್ಗಮಿಸಲು ಅವಕಾಶ ಕಲ್ಪಿಸಲಾಗುತ್ತದೆ. ಈ ನಿರ್ಬಂಧ ಇನ್ನು 5 ತಿಂಗಳು ಕಳೆದ ನಂತರ ಗಾಂಧಿ ಬಜಾರ್‌ನಲ್ಲಿ ಜಾರಿಗೆ ಬರಲಿದೆ.

| Date | 30-11-2020 |
| --- | --- |
| Page No | 3 |



ಉದಯವಾಣಿ
ಜನಮನದ ಜೀವನಾಡಿ

| Date | 30-11-2020 |
| --- | --- |
| Page No | 3 |


# ಕೊರೊನಾ: ಕಡಲೆಕಾಯಿ ಪರಿಷೆಗೆ ಈ ಬಾರಿ ಬ್ರೇಕ್?

ಬೆಂಗಳೂರು: ಕೊರೊನಾ ಮಹಾಮಾರಿ ಈ ಬಾರಿಯ ಹಬ್ಬ ಹಾಗೂ ಸಾಂಪ್ರದಾಯಿಕ ಆಚರಣೆಗಳನ್ನು ಕಳೆಗುಂದಿಸಿದೆ. ಇದೀಗ ಆ ಸಾಲಿಗೆ ಶತಮಾನಗಳ ಇತಿಹಾಸ ಹೊಂದಿರುವ ಕಡಲೆಕಾಯಿ ಪರಿಷೆಯೂ ಸೇರಿಕೊಳ್ಳುವ ಸಾಧ್ಯತೆಯಿದೆ.

ಪ್ರತಿ ಕಾರ್ತೀಕ ಮಾಸದ ಕೊನೇ ಸೋಮವಾರದ ದಿನ ನಾಡಪ್ರಭು ಕೆಂಪೇಗೌಡರ ಕಾಲದಿಂದಲೂ ಸಂಭ್ರಮದಿಂದ ನಡೆದುಕೊಂಡು ಬರುತ್ತಿರುವ 482 ವರ್ಷಗಳ ಇತಿಹಾಸ ಹೊಂದಿರುವ ಕಡಲೆಕಾಯಿ ಪರಿಷೆ ಈ ವರ್ಷ ಸರಳ ಮತ್ತು ಸಾಂಕೇತಿಕವಾಗಿ ನಡೆಯಲಿದೆ ಎಂದು ತಿಳಿದು ಬಂದಿದೆ.

ಕೋವಿಡ್ ಕಾರಣಕ್ಕೆ ಇದೇ ಮೊದಲ ಬಾರಿಗೆ ಕಡಲೆಕಾಯಿ ಪರಿಷೆ ಸಂಭ್ರಮಕ್ಕೆ ಅಡ್ಡಿ ಉಂಟಾಗಿದ್ದು ಸರಳವಾಗಿ ಪರಿಷೆ ನಡೆಸಲು ಧಾರ್ಮಿಕ ದತ್ತಿ ಇಲಾಖೆ ಕ್ರಮ ಕೈಗೊಂಡಿದೆ. ಪರಿಷೆ ದಿನ ಬಸವಣ್ಣ ಹಾಗೂ ಗಣೇಶನಿಗೆ ಸರಳ ಮತ್ತು ಸಾಂಪ್ರದಾಯಿಕ ಪೂಜೆ ನೆರವೇರಿಸಿ, ಭಕ್ತರಿಗೆ ದೇವರ ದರ್ಶನಕ್ಕೆ ಮಾತ್ರ ಅವಕಾಶ ಇರಲಿದೆ.

ರಾಜ್ಯ ಹಾಗೂ ಹೊರ ರಾಜ್ಯದ ಕಡಲೆಕಾಯಿ ವ್ಯಾಪಾರಿಗಳ ದಂಡೇ ಅಲ್ಲಿಗೆ ಆಗಮಿಸುತ್ತಿತ್ತು. 2 ದಿನ ಜನ ಜಾತ್ರೆಯೇ ನೆರೆದಿರುತ್ತಿತ್ತು. ಆದರೆ, ಈ ಬಾರಿ ಅಂಗಡಿ ಮುಂಗಟ್ಟು ಇರುವುದಿಲ್ಲ. ಈಗಾಗಲೇ ಅಂಗಡಿಗಳಿಗೆ ಜಾಗ ಕಾಯ್ದಿರಿಸಲಾಗುತ್ತಿತ್ತು. ಈ ಬಾರಿ ಅದು ನಡೆದಿಲ್ಲ ಎಂದು ಹೇಳಲಾಗಿದೆ. ಬಸವಣ್ಣ ಹಾಗೂ ದೊಡ್ಡ ಗಣೇಶನಿಗೆ ಪರಿಷೆ ಹಿನ್ನೆಲೆಯಲ್ಲಿ ಅದ್ದೂರಿಯಾಗಿ ಪೂಜೆ ನಡೆಯುತ್ತಿತ್ತು. ಪರಿಷೆಗೆ ಪ್ರತಿ ವರ್ಷ ನೆರೆಯ ಆಂಧ್ರಪ್ರದೇಶ, ತಮಿಳುನಾಡು ಮತ್ತು ರಾಜ್ಯದ ಚಿಂತಾಮಣಿ, ಮಂಡ್ಯ, ಕೋಲಾರ ಸೇರಿದಂತೆ ಬೇರೆ ಬೇರೆ ಭಾಗಗಳಿಂದ ವ್ಯಾಪಾರಿಗಳು ಬರುತ್ತಿದ್ದರು.

ಈ ಬಾರಿ ಕೊರೊನಾ ಹಿನ್ನೆಲೆಯಲ್ಲಿ ಪರಿಷೆನಡೆಸಿದರೆಕೋವಿಡ್ ಮಾರ್ಗಸೂಚಿ ಪಾಲನೆ ಮಾಡುವುದು ಕಷ್ಟ ಎಂದು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿದು ಬಂದಿದೆ.

> **'ಕಡಲೆಕಾಯಿ ಪರಿಷೆ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಈ ಬಗ್ಗೆ ಸಂಬಂಧಪಟ್ಟವರೊಂದಿಗೆ ಚರ್ಚಿಸಿ ಮಾಹಿತಿ ಪಡೆದುಕೊಳ್ಳುತ್ತೇನೆ'.**
>
> • ಮಂಜುನಾಥ್ ಪ್ರಸಾದ್, ಬಿಬಿಎಂಪಿ ಆಯುಕ್ತ

| Date | 30-11-2020 |
|---|---|
| Page No | 4 |

# 12 ಕಾರಿಡಾರ್ ಕೆಆರ್‌ಡಿಸಿಎಲ್‌ಗೆ

## 191 ಕಿ.ಮೀಗೆ 477.29 ಕೋಟಿ ರೂ. ಹಸ್ತಾಂತರಕ್ಕೆ ತಜ್ಞರ ಆಕ್ಷೇಪ

• ವಿಶೇಷ ವರದಿ

ಬೆಂಗಳೂರು: ಸಾಕಷ್ಟು ಪರ–ವಿರೋಧಗಳ ನಂತರ ಅಂತಿಮವಾಗಿ ನಗರದ 12 ಅಧಿಕ ದಟ್ಟಣೆ ರಸ್ತೆಗಳ ನಿರ್ವಹಣೆ ಮತ್ತು ಅಭಿವೃದ್ಧಿ ಹೊಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ (ಕೆಆರ್‌ಡಿಸಿಎಲ್) ಹಸ್ತಾಂತರಿಸಿ ಸರ್ಕಾರ ಈಚೆಗೆ ಆದೇಶ ಹೊರಡಿಸಿದೆ.

ಇದರೊಂದಿಗೆ ಅಭಿವೃದ್ಧಿ ಅನುಷ್ಠಾನಕ್ಕೆ ನೀಡಲಾದ 'ಬೆಂಗಳೂರು ವಿಶೇಷ ಮೂಲಸೌಕರ್ಯ ಯೋಜನೆ'ಗೆ ಅಡಿ ನೀಡಲಾದ 477.29 ಕೋಟಿ ಕೂಡ ಕೆಆರ್‌ಡಿಸಿಎಲ್‌ಗೆ ವರ್ಗಾವಣೆ ಆಗಲಿದೆ. ಜತೆಗೆ ವಿಸ್ತೃತ ಯೋಜನಾ ವರದಿ ತಯಾರಿಸಲು ನಿಗಮ ನೇಮಿಸಿದ್ದ ಖಾಸಗಿ ಯೋಜನಾ ಸಲಹೆಗಾರರ ಸೇವೆ ಮುಂದುವರಿಸಲು ಅನುಮೋದನೆ ನೀಡಲಾಗಿದ್ದು, ಅದರಂತೆ ಪ್ರತಿ ಕಾರಿಡಾರ್ ವ್ಯಾಪ್ತಿಗೆ ಒಂದು ಪ್ಯಾಕೇಜ್ ಮಾಡಿ ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಲಾಗಿದೆ.

ಅನುಮೋದನೆ ನೀಡಿದ ಮೊತ್ತದಲ್ಲಿ ಸುಮಾರು 300 ಕೋಟಿ ರೂ. ಅಭಿವೃದ್ಧಿಗೆ ಹಾಗೂ ಉಳಿದ ಮೊತ್ತ ನಿರ್ವಹಣೆಗೆ ಮೀಸಲಿಡಬೇಕು. ಮುಂದಿನ 4 ವರ್ಷ ಅಂದರೆ 2021–22 ರಿಂದ 2024–25 ರವರೆಗೆ ಪ್ರತಿ ವರ್ಷ ನಿರ್ವಹಣೆಗಾಗಿ ನೂರು ಕೋಟಿ ರೂ. ಸರ್ಕಾರ ಬಿಡುಗಡೆ ಮಾಡಲಿದೆ. ಯೋಜನೆ ವೆಚ್ಚ ಒಂದು ವೇಳೆ ನಿಗದಿಪಡಿಸಿದ ಮೊತ್ತ ಮೀರಿದರೆ, ಆ 'ಹೆಚ್ಚುವರಿ ಹಣ'ವನ್ನು ಬಿಬಿಎಂಪಿ ಭರಿಸಲಿದೆ ಎಂಬ ಷರತ್ತು ಕೂಡ ವಿಧಿಸಲಾಗಿದೆ.

ಆದರೆ, 'ನಗರದ ರಸ್ತೆಗಳ ಅಭಿವೃದ್ಧಿ ಹೊಣೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯದ್ದು' ಎಂದು ಹಿಂದೆ ಸಚಿವ ಸಂಪುಟದಲ್ಲೇ ತೀರ್ಮಾನ ಆಗಿದೆ. ಅಲ್ಲದೆ, ಹೀಗೆ ರಸ್ತೆ ಅಭಿವೃದ್ಧಿ ಆಯಾ ಸ್ಥಳೀಯ ಆಡಳಿತದ ಜವಾಬ್ದಾರಿ ಕೂಡ ಆಗಿರುತ್ತದೆ. ಹೀಗಿರುವಾಗ, ಸಂಪುಟದ ನಿರ್ಣಯ ಬದಿಗೊತ್ತಿ ಸುಮಾರು 200 ಕಿ.ಮೀ. ಉದ್ದದ ರಸ್ತೆಗಳ ನಿರ್ವಹಣೆ ಮತ್ತು ಅಭಿವೃದ್ಧಿ ಜವಾಬ್ದಾರಿಯನ್ನು ಕೆಆರ್‌ಡಿಸಿಎಲ್‌ಗೆ ವರ್ಗಾವಣೆ ಮಾಡಲಾಗಿದೆ. ಸರ್ಕಾರದ ಈ ನಡೆ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 13 ಸಾವಿರ ಕಿ.ಮೀ. ಉದ್ದದ ರಸ್ತೆ ಜಾಲವಿದ್ದು, ಈ ಪೈಕಿ 191 ಕಿ.ಮೀ.ನಷ್ಟು 12 ಅಧಿಕ ದಟ್ಟಣೆ ಇರುವ ಕಾರಿಡಾರ್ ಮತ್ತು 474 ಕಿ.ಮೀ. ಉದ್ದದ ಪ್ರಮುಖ ಮತ್ತು ಉಪ ಪ್ರಮುಖ ರಸ್ತೆಗಳಿವೆ. ಈ ಕಾರಿಡಾರ್‌ಗಳ ನಿರ್ವಹಣೆ ಕಷ್ಟವಾಗಬಹುದು. ಹಾಗೂ ಬಿಬಿಎಂಪಿಯಲ್ಲಿ ರಸ್ತೆ ನಿರ್ವಹಣೆ ಮತ್ತು ಉನ್ನತೀಕರಣಕ್ಕೆ ಪ್ರತ್ಯೇಕ ಅನುದಾನದಡಿ ಕಾರ್ಯನಿರ್ವಹಿಸುವ ವ್ಯವಸ್ಥೆ ಇಲ್ಲದಿರುವುದರಿಂದ ಅಭಿವೃದ್ಧಿಗೆ ಹಿನ್ನಡೆ ಉಂಟಾಗಿದೆ ಎಂಬ ಅಭಿಪ್ರಾಯ ಈ ಹಿಂದೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವ್ಯಕ್ತವಾಗಿತ್ತು. ಅದನ್ನು ಆಧರಿಸಿ ಈ ಹಸ್ತಾಂತರ ನಿರ್ಧಾರ ಕೈಗೊಳ್ಳಲಾಗಿದೆ ಎನಲಾಗಿದೆ.



### 12 ಕಾರಿಡಾರ್‌ಗಳು

| ಕಾರಿಡಾರ್ | (ಕಿ.ಮೀ.ನಲ್ಲಿ) |
|---|---|
| ಬಳ್ಳಾರಿ ರಸ್ತೆ | 7.45 |
| ಹಳೆಯ ಮದ್ರಾಸ್ ರಸ್ತೆ | 18.50 |
| ಹಳೆಯ ವಿಮಾನ ನಿಲ್ದಾಣ ರಸ್ತೆ | 17.15 |
| ಸರ್ಜಾಪುರ ರಸ್ತೆ | 8.75 |
| ಹೊಸೂರು ರಸ್ತೆ | 6.45 |
| ಬನ್ನೇರುಘಟ್ಟ ರಸ್ತೆ | 16.50 |
| ಕನಕಪುರ ರಸ್ತೆ | 14.50 |
| ಮೈಸೂರು ರಸ್ತೆ | 15.40 |
| ಮಾಗಡಿ ರಸ್ತೆ | 12 |
| ತುಮಕೂರು ರಸ್ತೆ | 7.9 |
| ವೆಸ್ಟ್ ಆಫ್ ಕಾರ್ಡ್ ರೋಡ್ | 8.4 |
| ಹೊರವರ್ತುಲ ರಸ್ತೆ | 58 |
| ಒಟ್ಟಾರೆ | 191 ಕಿ.ಮೀ |

### ಅಶಕ್ತಗೊಳಿಸುವ ಪ್ರಯತ್ನ

ಉದ್ದೇಶಿತ 12 ಕಾರಿಡಾರ್‌ಗಳ ನಿರ್ವಹಣೆ ಮತ್ತು ಅಭಿವೃದ್ಧಿಯನ್ನು ಬಿಬಿಎಂಪಿ ಮೂಲಕವೇ ಕೈಗೆತ್ತಿಕೊಳ್ಳಲು ಈಚೆಗೆ ನಡೆದ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಗಿತ್ತು. ಇತ್ತೀಚೆಗೆ ಅಂತಿಮವಾಗಿ ಕೆಆರ್‌ಡಿಸಿಎಲ್‌ಗೆ ವಹಿಸಲು ನಿರ್ಣಯ ಕೈಗೊಂಡು ಆದೇಶ ಹೊರಡಿಸಲಾಗಿದೆ. ಸುಮಾರು 3 ವರ್ಷಗಳ ಹಿಂದೆ ಇದೇ ರೀತಿ, ನಗರದ ಕೆಲವು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗಿತ್ತು.

ಇದಕ್ಕಾಗಿ ಸುಮಾರು 800 ಕೋಟಿ ರೂ. ಖರ್ಚು ಮಾಡಲಾಗಿತ್ತು. ಆದರೆ, ಇದರಿಂದ ನಿರೀಕ್ಷಿತ ಮಟ್ಟದಲ್ಲಿ ಜನರಿಗೆ ಅನುಕೂಲ ಆಗಲಿಲ್ಲ ಎಂದು ತಜ್ಞರು ಹೇಳುತ್ತಾರೆ. 'ಬಿಬಿಎಂಪಿ ಒಂದು ಸ್ಥಳೀಯ ಸರ್ಕಾರ. ಕೆಆರ್‌ಡಿಸಿಎಲ್ ರಾಜ್ಯ ಸರ್ಕಾರದ ಅಡಿ ಬರುತ್ತದೆ. ಅಷ್ಟಕ್ಕೂ ಈ 12 ಕಾರಿಡಾರ್‌ಗಳು ನಗರದ ಮಧ್ಯೆ ಹಾದುಹೋಗುತ್ತವೆ. ಹಾಗಿದ್ದರೆ, ರಸ್ತೆಯ ಫುಟ್‌ಪಾತ್, ಬಸ್ ಪಥಗಳ ನಿರ್ವಹಣೆ ಯಾರು ಮಾಡುತ್ತಾರೆ? ಒಂದೆಡೆ ಸರ್ಕಾರ ಘನತ್ಯಾಜ್ಯ ನಿರ್ವಹಣೆಗೊಂದು ಪ್ರತ್ಯೇಕ ನಿಗಮ ಸ್ಥಾಪನೆ ಮಾಡಲು ಹೊರಟಿದೆ. ಮತ್ತೊಂದೆಡೆ ರಸ್ತೆಗಳ ನಿರ್ವಹಣೆಯನ್ನು ಬೇರೆ ನಿಗಮಕ್ಕೆ ವಹಿಸುತ್ತಿದೆ. ಇದೆಲ್ಲವೂ ಸ್ಥಳೀಯ ಸಂಸ್ಥೆಯನ್ನು ಅಶಕ್ತಗೊಳಿಸುವ ಪ್ರಯತ್ನ. ಹೆಚ್ಚು ಸಂಸ್ಥೆಗಳಾದಷ್ಟೂ ಹೆಚ್ಚು ಸಮನ್ವಯ ಕೊರತೆ ಉಂಟಾಗುತ್ತದೆ. ಇದೆಲ್ಲದರಿಂದ ಜನ ಕಷ್ಟ ಎದುರಿಸಬೇಕಾಗುತ್ತದೆ ಅಷ್ಟೇ' ಎಂದು ಜನಾಗ್ರಹ ಸಂಸ್ಥೆ ಮುಖ್ಯಸ್ಥ ಶ್ರೀನಿವಾಸ್ ಆಲವಿಲ್ಲಿ ಆರೋಪಿಸುತ್ತಾರೆ.

ಸಂಯುಕ್ತ ಕರ್ನಾಟಕ

| Date | 30-11-2020 |
|---|---|
| Page No | 2 |


# ಪರಿಷೆಗೂ ಕೊರೊನಾ ಕರಿನೆರಳು

## ಈ ಬಾರಿ ರಸ್ತೆ ಬದಿಯಲ್ಲಿ ಕಡಲೆಕಾಯಿ ಮಾರಾಟ ಇಲ್ಲ

ಸಂ.ಕ. ಸಮಾಚಾರ ಬೆಂಗಳೂರು

ಬೆಂಗಳೂರು ನಗರದಲ್ಲಿ ಗ್ರಾಮೀಣ ಸೊಗಡನ್ನು ಉಳಿಸಿಕೊಂಡು ಬಂದಿರುವ ಇತಿಹಾಸ ಪ್ರಸಿದ್ಧ ಬಸವನಗುಡಿ ಕಡಲೆಕಾಯಿ ಪರಿಷೆಗೆ ನಿರ್ಬಂಧ ಹೇರಲಾಗಿದೆ.

ಕಾರ್ತಿಕ ಮಾಸದ ಕಡೆಯ ಸೋಮವಾರ ಕಡಲೆಕಾಯಿ ಪರಿಷೆ ನಡೆಯುವುದು ವಾಡಿಕೆ. ಆದರೆ, 480 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ನಗರದ ಬಸವನಗುಡಿಯಲ್ಲಿ ಇತಿಹಾಸ ಪ್ರಸಿದ್ಧ, ಗ್ರಾಮೀಣ ಸೊಗಡಿನ ಕಡಲೆಕಾಯಿ ಪರಿಷೆ ಜಾತ್ರೆಗೆ ನಿರ್ಬಂಧ ಹೇರಲಾಗಿದೆ. ಇದಕ್ಕೆ ಕೊರೊನಾ ಸೋಂಕು ಹರಡುವುದು ನಿಲ್ಲದೇ ಇರುವುದಾಗಿದೆ.

ಸೋಂಕು ಹರಡುವ ಸಾಧ್ಯತೆ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಈ ಬಾರಿ ದೊಡ್ಡ ಗಣೇಶ ಹಾಗೂ ಬಸವಣ್ಣನಿಗೆ ಪೂಜೆ ಮಾಡುವ ಮೂಲಕ ಸರಳವಾಗಿ ನಡೆಸಲು ಧಾರ್ಮಿಕ ದತ್ತಿ ಇಲಾಖೆ ಆದೇಶ ಹೊರಡಿಸಿದೆ. ರಸ್ತೆ ಬದಿ ಕಡಲೆಕಾಯಿ ಮಾರಾಟ ಮಾಡುವಂತಿಲ್ಲ. ಜೊತೆಗೆ ದೇವಸ್ಥಾನದ ಅರ್ಚಕರು ಮತ್ತು ಸಿಬ್ಬಂದಿ ಉಪಸ್ಥಿತಿಯಲ್ಲಿ ಸಾಂಕೇತಿಕ, ಸಾಂಪ್ರದಾಯಿಕ ಹಾಗೂ ಸರಳವಾಗಿ ಕಡಲೆಕಾಯಿ ಪರಿಷೆಯನ್ನು ಆಚರಣೆ ಮಾಡಬೇಕೆಂದು ಸೂಚನೆ ನೀಡಲಾಗಿದೆ.

ಕೊರೊನಾ ಕಾರಣದಿಂದಾಗಿ ಧಾರ್ಮಿಕ ದತ್ತಿ ಇಲಾಖೆ ದೊಡ್ಡ ಬಸವಣ್ಣ ದೇವಸ್ಥಾನದ ರಸ್ತೆ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಬೀದಿ ಬದಿ ಅಂಗಡಿ ಮುಂಗಟ್ಟುಗಳನ್ನು ತೆರೆಯುವುದು ಹಾಗೂ ರಸ್ತೆ ಬದಿ ಕಡಲೆಕಾಯಿ ಮಾರಾಟಕ್ಕೂ ನಿರ್ಬಂಧ ವಿಧಿಸಿದೆ.

ರಾಜ್ಯದ ಹಲವು ಗ್ರಾಮಗಳು ಹಾಗೂ ತಮಿಳುನಾಡಿನಿಂದಲೂ ಕೆಲ ವರ್ಷಗಳಿಂದ ರೈತರು



ಸಾಂದರ್ಭಿಕ ಚಿತ್ರ

ಕಡಲೆಕಾಯಿ ಪರಿಷೆಯಲ್ಲಿ ವ್ಯಾಪಾರ ಮಾಡುತ್ತಿದ್ದರು. ಆದರೆ, ಈ ಬಾರಿ ಬಿಬಿಎಂಪಿ ಹಾಗೂ ಧಾರ್ಮಿಕ ದತ್ತಿ ಇಲಾಖೆಯ ಆದೇಶದಿಂದಾಗಿ ಜಾತ್ರೆ ನಡೆಯುತ್ತಿಲ್ಲ.

ಇದೇ ವೇಳೆ ಬಸವನಗುಡಿ ಶಾಸಕ ರವಿ ಸುಬ್ರಮಣ್ಯರು ಮಾಧ್ಯಮಗಳಿಗೆ ವಿವರಿಸಿ, ಈ ಬಾರಿ ಕಡಲೆಕಾಯಿ ಪರಿಷೆಯನ್ನು ಹಿಂದಿನ ವರ್ಷಗಳಂತೆ ಆಚರಣೆ ಮಾಡಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

- ಸಾಂಪ್ರದಾಯಿಕ ಆಚರಣೆ ಮಾತ್ರ
- ಈ ಬಾರಿ ಕಡಲೆಕಾಯಿ ಪರಿಷೆಗೆ ನಿರ್ಬಂಧ
- ಪಾಲಿಕೆ, ಧಾರ್ಮಿಕ ಇಲಾಖೆ ಆದೇಶ

### ಕಡಲೆಕಾಯಿ ಪರಿಷೆ ಇತಿಹಾಸ

ಬೆಂಗಳೂರಿನ ಬಸವನಗುಡಿಯ ಪಕ್ಕದ ಹಳ್ಳಿಗಳಲ್ಲಿ ಪ್ರತಿ ವರ್ಷ ಕಡಲೆಕಾಯಿ ಬೆಳೆಯುತ್ತಿದ್ದರು. ಆದರೆ ಕಟಾವಿಗೆ ಸಿದ್ಧವಾದ ನೆಲಗಡಲೆಯನ್ನೆಲ್ಲ ಗದ್ದೆಗೆ ದಾಳಿ ಇಡುತ್ತಿದ್ದ ಬಸವವೊಂದು ನಾಶಪಡಿಸುತ್ತಿತ್ತು. ಅದನ್ನು ಕಂಡು ರೈತರು ಅಟ್ಟಿಸಿಕೊಂಡು ಹೋಗಿ ಬಡಿಕೆಯಿಂದ ಬಡಿದರು. ಇದರಿಂದ ಅದು ಅಲ್ಲಿಯೇ ಕಲ್ಲಾಯಿತು. ಇದರಿಂದ ಗಾಬರಿಗೊಂಡ ರೈತರು ತಮ್ಮ ಬೆಳೆಯನ್ನು ರಕ್ಷಿಸಿಕೊಳ್ಳಲು ತಮ್ಮ ಮೊದಲ ಬೆಳೆಯನ್ನು ಬಸವನಿಗೆ ಅರ್ಪಿಸಿ ಪ್ರಾರ್ಥಿಸಲು ಆರಂಭಿಸಿದರು. ಅಂದಿನಿಂದ ಇಂದಿನವರೆಗೆ ಇದು ಕಡಲೆಕಾಯಿ ಪರಿಷೆಯಾಗಿ ಮಾರ್ಪಟ್ಟಿದೆ. ಕೆಂಪೇಗೌಡರು 16ನೇ ಶತಮಾನದಲ್ಲಿ ದೊರೆತ ಬೃಹತ್ ನಂದಿಯ ಸುತ್ತಲೂ ದೇವಾಲಯವನ್ನು ನಿರ್ಮಾಣ ಮಾಡಿದರು.

ಸಂಯುಕ್ತ ಕರ್ನಾಟಕ

| Date | 30-11-2020 |
|---|---|
| Page No | 3 |


ಕಾಲ್ನಡಿಗೆಗೇ ಜನರ ಹೆಚ್ಚು ಪ್ರಾಶಸ್ತ್ಯ । ಉಚಿತ ಕೋವಿಡ್ ಪರೀಕ್ಷೆ ಸೌಲಭ್ಯ । ಯುವಕನಿಂದ ಗಿಟಾರ್ ಗಾಯನ

# ಸ್ವಚ್ಛವಾಯು ರಸ್ತೆಯಲ್ಲಿ ಸದ್ದುಗದ್ದಲವಿಲ್ಲ..

**ಸಂ.ಕ.ಸಮಾಚಾರ, ಬೆಂಗಳೂರು**

ನವಿರಾದ ಮೋಡ ಕವಿದ ವಾತಾವರಣ, ಅಲ್ಲಲ್ಲಿ ಸಡಗರದಿಂದ ವಾಯುವಿಹಾರ ಮಾಡುತ್ತಿರುವ ತರುಣಿಯರು, ಒಂದು ಕಡೆ ವರ್ಣಚಿತ್ರಗಳನ್ನು ಮಾರುತ್ತಾ ನಿಂತಿರುವ ಕಲಾವಿದ, ಮತ್ತೊಂದೆಡೆ ಹಕ್ಕಿಗಳ ಚಿಲಿಪಿಲಿಯನ್ನು ಮೀರಿಸುವ ಮಟಾಣಿಗಳ ಕಲರವ.....ಇವೆಲ್ಲಾ ಕಂಡುಬಂದಿದ್ದು ನಗರದ ಚರ್ಚ್‌ಸ್ಟ್ರೀಟ್‌ನಲ್ಲಿ.



ಚರ್ಚ್‌ಸ್ಟ್ರೀಟ್‌ನಲ್ಲಿ ಯುವಕ, ಯುವತಿಯರ ವಾಯುವಿಹಾರ.

ಸ್ವಚ್ಛ ವಾಯು ರಸ್ತೆ ಅಭಿಯಾನದ ಅಂಗವಾಗಿ ಕಳೆದ ತಿಂಗಳಿನಿಂದ ಚರ್ಚ್‌ಸ್ಟ್ರೀಟ್‌ನಲ್ಲಿ ವಾರಾಂತ್ಯದಲ್ಲಿ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಐದು ತಿಂಗಳ ಕಾಲ ಪ್ರಾಯೋಗಿಕವಾಗಿ ಈ ನಿಷೇಧ ಮುಂದುವರೆಯಲಿದ್ದೆ. ಎಲೆಕ್ಟ್ರಿಕ್ ವಾಹನಗಳು ಹಾಗೂ ಸೈಕಲ್‌ಗಳಿಗೆ ಅನುಮತಿ ನೀಡಿದ್ದರೂ ಜನರು ಕಾಲ್ನಡಿಗೆಗೇ ಹೆಚ್ಚು ಪ್ರಾಶಸ್ತ್ಯ ನೀಡಿದ್ದರು. ಜನರಿಗೆ ಉಚಿತ ಕೋವಿಡ್ ಪರೀಕ್ಷೆ ಸೌಲಭ್ಯವನ್ನೂ ಸಹ ಕಲ್ಪಿಸಲಾಗಿತ್ತು.

ವಾಹನ ನಿಷೇಧದ ಪ್ರಯೋಗವನ್ನು ಮುಕ್ತ ಹೃದಯದಿಂದ ಸಾರ್ವಜನಿಕರು ಸ್ವಾಗತಿಸಿರುವುದು ಅಲ್ಲಿ ಸೇರಿದ್ದ ಜನಜಂಗುಳಿಯಿಂದಲೇ ತಿಳಿದು ಬರುತ್ತಿತ್ತು. ತನಗೆ ತಿಳಿಯದಂತೆ ತಾನೇ ಚರ್ಚ್‌ಸ್ಟ್ರೀಟ್ ಒಂದು ಕಲಾಜಾತ್ರೆಯಾಗಿ ಪರಿವರ್ತನೆಗೊಂಡಿತ್ತು. ಮೂಲೆಯಲ್ಲೊಬ್ಬ ಯುವಕ ಸುಶ್ರಾವ್ಯವಾಗಿ ಗಿಟಾರ್ ನುಡಿಸುತ್ತಾ ಕುಳಿತಿದ್ದ.

ಇಂಗ್ಲಿಷ್‌ನ ಬಿಫೋರ್ ಸನ್‌ರೈಸ್ ಸಿನಿಮಾ ನೆನಪಿಸುವಂತೆ, ಯಾವುದೋ ಒಂದು ಕಂಬಕ್ಕೆ ಒಂದು ಫಲಕವನ್ನು ನೇತುಹಾಕಲಾಗಿತ್ತು. ನನಗೊಂದು ಪದ ಕೊಡಿ, ನಿಮಗೊಂದು ಕವಿತೆ ಕೊಡುತ್ತೇನೆ!

ಮತ್ತೊಂದೆಡೆ ಹುಚ್ಚಿಗೆ ನೆರೆಬಂದ ಘಳಿಗೆಯಂತೆ ಜನರು ಸೆಲ್ಫಿ ತೆಗೆದುಕೊಳ್ಳಲೆಂದೇ ಮಾಡಿದ ಒಂದು ಪುಟ್ಟ ತಾಣ. ತನ್ನ ನಡುವೆ ನಿಂತಿರುವ ಜನರನ್ನು ಯಕ್ಷಲೋಕದವರಂತೆ ತೋರಿಸುವ ಸುಂದರ ರೆಕ್ಕೆಗಳಿರುವ ಒಂದು ಗೋಡೆಯ ವರ್ಣಚಿತ್ರ, ಮನೆಯ ಸದಸ್ಯರೊಡನೆ ವಾಯುವಿಹಾರಕ್ಕೆ ತಮ್ಮ ಪ್ರೀತಿಯ ಶ್ವಾನವನ್ನೂ ಕರೆದುಕೊಂಡುಬಂದಿರುವ ಜನತೆ. ಗುಡ್ಡೆ ಹಾಕಿದ ಮಲ್ಲಿಗೆ, ಸಂಪಿಗೆ, ಜಾಜಿ ಹೂಗಳಂತೆ ಚಿತ್ತಾರಮಯ ಮಾಸ್ಕ್‌ಗಳನ್ನು ಮಾರುತ್ತಿರುವ ಬೀದಿಬದಿಯ ವ್ಯಾಪಾರಿ. ಈ ದೃಶ್ಯಗಳನ್ನು ಸೆರೆಹಿಡಿಯಲು ಓಡಾಡುತ್ತಿರುವ ವೃತ್ತಿಪರ, ಹವ್ಯಾಸಿ ಛಾಯಾಗ್ರಾಹಕರ ದಂಡು...

ವಾರಾಂತ್ಯದಲ್ಲಿ ವಾಹನ ನಿಷೇಧ ಪ್ರಾಯೋಗಿಕವಾಗಿಯೋ, ಪ್ರಾಯೋಜಿತವಾಗಿಯೋ ಇರದೆ ಶಾಶ್ವತವಾಗಲಿ ಎಂಬ ಸದಾಶಯ ಜನರ ಸಡಗರದಲ್ಲಿ ಕಾಣುತ್ತಿತ್ತು.

ಸಂಯುಕ್ತ ಕರ್ನಾಟಕ

| Date | 30-11-2020 |
| --- | --- |
| Page No | 3 |

# ಅಭಿವೃದ್ಧಿ ಶುಲ್ಕ ಗೊಂದಲ

**ಸಂಕ ಸಮಾಚಾರ ಬೆಂಗಳೂರು**

ನಗರದಲ್ಲಿ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಶುಲ್ಕ ಪಾವತಿ ಕುರಿತು ಗೊಂದಲ ಉಂಟಾಗಿದ್ದು, ಸರ್ಕಾರಕ್ಕೆ ಬಿಬಿಎಂಪಿ ಪತ್ರ ಬರೆದು ಸ್ಪಷ್ಟನೆ ಕೇಳಿದೆ.

ಕಟ್ಟಡ ನಿರ್ಮಾಣದ ನಕ್ಷೆ ಮಂಜೂರಾತಿ, ಶೇ.0.8 ರಷ್ಟು ಅಭಿವೃದ್ಧಿ ಶುಲ್ಕ ಭಾರೀ ಪ್ರಮಾಣದಲ್ಲಿ ಹೆಚ್ಚಳ ಹಾಗೂ ನಗರದ ಕೇಂದ್ರ ಭಾಗದಲ್ಲಿ ಕಟ್ಟಡ ನಿರ್ಮಾಣಕ್ಕೂ ಮೆಟ್ರೋ, ರಿಂಗ್ ರಸ್ತೆ ಅಭಿವೃದ್ಧಿ, ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಶುಲ್ಕ ಪಾವತಿಸುವ ಕುರಿತ ಗೊಂದಲಗಳಿಗೆ ಸ್ಪಷ್ಟನೆ ಕೋರಿ ಬಿಬಿಎಂಪಿಯು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ.

ಕರ್ನಾಟಕ ಯೋಜನಾ ಪ್ರಾಧಿಕಾರದ ಆದೇಶದ ಅನ್ವಯ ಬಿಬಿಎಂಪಿ ಕಳೆದ ಸೆಪ್ಟಂಬರ್‌ನಲ್ಲಿ ಪರಿಷ್ಕೃತ ದರಗಳು 2020ರ ಫೆ. 25ರಿಂದಲೇ ಅನ್ವಯವಾಗುವಂತೆ ಆದೇಶ ಮಾಡಿತ್ತು. ಅದರಂತೆ ನಕ್ಷೆ ಮಂಜೂರಾತಿಗೆ (ಒಂದು ಅಂತಸ್ತು) ಪ್ರತಿ ಚದರ ಮೀಟರ್‌ಗೆ ವಸತಿ ಕಟ್ಟಡ ಹಾಗೂ ಇತರೆ ಕಟ್ಟಡಗಳಿಗೆ ಶೇ. 0.5 ರಷ್ಟು ಶುಲ್ಕ ಹೆಚ್ಚಳ. ವಾಣಿಜ್ಯ ಕಟ್ಟಡಕ್ಕೆ ಶೇ. 1.5 ರಷ್ಟು ಹಾಗೂ ಕೈಗಾರಿಕೆ ಕಟ್ಟಡಗಳಿಗೆ ಶೇ. 1 ರಷ್ಟು ಏರಿಕೆ ಮಾಡಲಾಗಿತ್ತು. ಬಹುಮಹಡಿ ಕಟ್ಟಡ ನಕ್ಷೆ ಮಂಜೂರಾತಿಗೆ ವಸತಿ ಕಟ್ಟಡ ಮತ್ತು ಇತರೆ ಕಟ್ಟಡಗಳಿಗೆ ಪ್ರತಿ ಚದರ ಮೀಟರ್‌ಗೆ 20 ರೂ., ಕೈಗಾರಿಕೆ ಕಟ್ಟಡಗಳಿಗೆ 40 ರೂ., ವಾಣಿಜ್ಯ ಕಟ್ಟಡಗಳಿಗೆ 100ರೂ. ದರ ವಿಧಿಸಲಾಗಿತ್ತು. ಇದರೊಂದಿಗೆ ಮೆಟ್ರೋ, ನೀರು ಸರಬರಾಜು ಯೋಜನೆ ಅಭಿವೃದ್ಧಿ, ರಿಂಗ್ ರಸ್ತೆ ಅಭಿವೃದ್ಧಿ, ಕೊಳಗೇರಿ ಪ್ರದೇಶ ಅಭಿವೃದ್ಧಿ ಹಾಗೂ ಬೃಹತ್ ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಸೆಸ್ ಶೇ. 0.8 ರಷ್ಟು ರಷ್ಟು ಹೆಚ್ಚಳ ಮಾಡಿ ಆದೇಶಿಸಲಾಗಿತ್ತು.



**ಸರ್ಕಾರದ ಸ್ಪಷ್ಟನೆಗೆ ಪಾಲಿಕೆ ಪತ್ರ**

ಈ ಆದೇಶದಿಂದ ಈಗಾಗಲೇ ನೀರು ಸರಬರಾಜು ಯೋಜನೆ, ಮೆಟ್ರೋ ವ್ಯವಸ್ಥೆ, ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಹೊಂದಿರುವ ಬೆಂಗಳೂರಿನ ಕೇಂದ್ರ ಭಾಗದ ಬಿಬಿಎಂಪಿ ಹಳೆಯ 100 ವಾರ್ಡ್‌ನ ಸಾರ್ವಜನಿಕರು ಕೂಡಾ ಮತ್ತೆ ಹೊಸ ಅಭಿವೃದ್ಧಿ ಸೆಸ್ ಪಾವತಿಸಬೇಕಾದ ಅನಿವಾರ್ಯತೆ ನಿರ್ಮಾಣಗೊಂಡಿದೆ. ಹಾಗಾಗಿ, ಸಾಕಷ್ಟು ಈ ಬಗ್ಗೆ ಗೊಂದಲ ಸೃಷ್ಟಿಯಾಗುತ್ತಿವೆ.

ಹಾಗೆಯೇ ಸೂಚಿತ ನಿವೇಶನಕ್ಕಿಂತ ಕಡಿಮೆ ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಿಸಿದರೂ ಇಡೀ ನಿವೇಶನಕ್ಕೆ ಅಭಿವೃದ್ಧಿ ಶುಲ್ಕ ಪಾವತಿ ಮಾಡಬೇಕಾಗಿದೆ. ಇದರಿಂದ ಕಟ್ಟಡ ನಿರ್ಮಾಣ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಶುಲ್ಕದ ರೂಪದಲ್ಲಿ ಸರ್ಕಾರಕ್ಕೆ ಪಾವತಿ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಈ ವಿಷಯವಾಗಿ ಸ್ಪಷ್ಟನೆ ನೀಡುವಂತೆ ಬಿಬಿಎಂಪಿ ನಗರ ಯೋಜನಾ ವಿಭಾಗದಿಂದ ರಾಜ್ಯ ಸರ್ಕಾರಕ್ಕೆ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಕ್ಕೆ ಪತ್ರ ಬರೆದು ಸ್ಪಷ್ಟನೆ ಕೋರಿದೆ.

ಹೊಸ ದಿಗಂತ

| Date | 30-11-2020 |
| --- | --- |
| Page No | 12 |

# 686 ಜನರಿಗೆ ಕೊರೋನಾ ಸೋಂಕು

**ಬೆಂಗಳೂರು:** ನಗರದಲ್ಲಿ ಭಾನುವಾರ 686 ಜನರಿಗೆ ಕೊರೋನಾ ಸೋಂಕು ದೃಢಪಟ್ಟಿದೆ. 723 ಸೋಂಕಿತರು ಆಸ್ಪತ್ರೆಯಿಂದ ಮನೆಗೆ ತೆರಳಿದ್ದು, 10 ಜನರು ಮೃತರಾಗಿದ್ದಾರೆ. ಒಟ್ಟು 3,69,290 ಮಂದಿಯಲ್ಲಿ ಸೋಂಕು ದೃಢಪಟ್ಟಿದ್ದು, ಇಲ್ಲಿಯವರೆಗೆ 4131 ಜನರು ಬಲಿಯಾಗಿದ್ದಾರೆ. ಇಲ್ಲಿಯವರೆಗೆ 3,46,839 ಜನರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಕೋವಿಡ್ ನಿಗದಿತ ಆಸ್ಪತ್ರೆಗಳು ಹಾಗೂ ಆರೋಗ್ಯ ಕೇಂದ್ರಗಳು ಹಾಗೂ ಆರೈಕೆ ಕೇಂದ್ರಗಳು ಒಳಗೊಂಡಂತೆ 18,319 ಜನ ಸಕ್ರಿಯ ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ.



ಭಾನುವಾರದ ಬಿಬಿಎಂಪಿ ಕೋವಿಡ್ ವರದಿ ಪ್ರಕಾರ ಸಿಟಿಯಲ್ಲಿ ಒಟ್ಟು ಸಕ್ರಿಯ 2 ಕಂಟೈನ್ಮೆಂಟ್ ಜೋನ್‌ಗಳಿವೆ. ನಗರದ 11,57,039 ಜನರನ್ನು ಪ್ರಾಥಮಿಕ ಸಂಪರ್ಕಿತರನ್ನು ಗುರುತಿಸಲಾಗಿದ್ದು, ದ್ವಿತೀಯ ಸಂಪರ್ಕಿತರನ್ನು 13,47,899 ಜನರನ್ನು ಗುರುತಿಸಲಾಗಿದೆ. ಇದರಲ್ಲಿ ಪಾಸಿಟಿವ್ ಪ್ರಮಾಣ ಶೇ.8.31 ರಷ್ಟಿದೆ. ಕೊರೋನಾಕ್ಕೆ ಮೃತರಾಗುತ್ತಿರುವ ಪ್ರಮಾಣ ಶೇ.1.12 ರಷ್ಟಿದ್ದು, ಗುಣಮುಖರಾಗುತ್ತಿರುವ ಪ್ರಮಾಣ ಶೇ.93.92 ರಷ್ಟಿದೆ.

**ಐಸಿಯು ಪ್ರಕರಣಗಳ ಶೇ.1ಕ್ಕೆ ಇಳಿಕೆ**

ರಾಜಧಾನಿಯಲ್ಲಿ 18,319 ಕರೊನಾ ಸಕ್ರಿಯ ಸೋಂಕಿತರಲ್ಲಿ ಕೇವಲ 184 ಮಂದಿ ಐಸಿಯುಗಳಲ್ಲಿ ಚಿಕಿತ್ಸೆ ಪಡೆಯುವ ಮೂಲಕ ಐಸಿಯು ಪ್ರಕರಣಗಳ ಪ್ರಮಾಣ ಶೇ.1ಕ್ಕೆ ಇಳಿಕೆಯಾಗಿದೆ. ಜನರು ಸೋಂಕಿನ ಲಕ್ಷಣ ಕಂಡುಬಂದ ಕೂಡಲೇ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಐಸಿಯುಗೆ ದಾಖಲಾಗುವ ಪ್ರಕರಣಗಳು ಕಡಿಮೆಯಾಗಿದೆ. ಇದರಿಂದ ಕೋವಿಡ್ ಸಾವು ಮತ್ತಷ್ಟು ಇಳಿಮುಖವಾಗುವ ನಿರೀಕ್ಷೆಯಿದೆ.

ಜನದನಿಯ ಸಾರಥಿ
ವಾರ್ತಾ ಭಾರತಿ

| Date | 30-11-2020 |
| --- | --- |
| Page No | 2 |


# ಬಸವನಗುಡಿ ಕಡಲೆಕಾಯಿ ಪರಿಷೆಗೆ ನಿರ್ಬಂಧ

ಬೆಂಗಳೂರು, ನ.29: ಕೊರೋನ ಕಾರಣದಿಂದಾಗಿ ನೂರಾರು ವರ್ಷಗಳ ಇತಿಹಾಸವಿರುವ ನಗರದ ಬಸವನಗುಡಿಯಲ್ಲಿ ಪ್ರತಿವರ್ಷ ನಡೆಯುವ ಗ್ರಾಮೀಣ ಸೊಗಡಿನ ಕಡಲೆಕಾಯಿ ಪರಿಷೆಗೆ ಈ ಭಾರಿ ನಿರ್ಬಂಧ ಹೇರಲಾಗಿದೆ.

ಕಾರ್ತಿಕ ಮಾಸದ ಕೊನೆಯ ಸೋಮವಾರದಿಂದ 3ದಿನ ಬಸವನಗುಡಿಯಲ್ಲಿ ಕಡಲೆಕಾಯಿ ಪರಿಷೆಯನ್ನು ನಡೆಸಿಕೊಂಡು ಬರಲಾಗುತ್ತಿದೆ. ಆದರೆ, ಕೊರೋನ ಸೋಂಕು ಹರಡುವ ಸಾಧ್ಯತೆ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಈ ಬಾರಿ ದೊಡ್ಡ ಗಣೇಶ ಹಾಗೂ ಬಸವಣ್ಣನಿಗೆ ಪೂಜೆ ಮಾಡುವ ಮೂಲಕ ಸರಳವಾಗಿ ನಡೆಸಲು ಧಾರ್ಮಿಕ ದತ್ತಿ ಇಲಾಖೆ ಆದೇಶ ಹೊರಡಿಸಿದೆ.

ಕೊರೋನ ಹಿನ್ನೆಲೆಯಲ್ಲಿ ರಸ್ತೆ ಬದಿ ಕಡಲೆಕಾಯಿ ಮಾರಾಟ ಮಾಡುವಂತಿಲ್ಲ. ಎಂಬುವುದನ್ನು ಸಾರ್ವಜನಿಕರಿಗೆ ಅರಿವು ಮೂಡಿಸಬೇಕು. ಜೊತೆಗೆ ದೇವಸ್ಥಾನದ ಅರ್ಚಕರು ಮತ್ತು ಸಿಬ್ಬಂದಿ ಉಪಸ್ಥಿತಿಯಲ್ಲಿ ಸಾಂಕೇತಿಕ, ಸಾಂಪ್ರದಾಯಿಕ ಹಾಗೂ ಸರಳವಾಗಿ ಕಡಲೆಕಾಯಿ ಪರಿಷೆಯನ್ನು ಆಚರಣೆ ಮಾಡಬೇಕೆಂದು ಸೂಚನೆ ನೀಡಲಾಗಿದೆ.



ಸಾಂದರ್ಭಿಕ ಚಿತ್ರ

ಮಾಧ್ಯಮಗಳ ಮೂಲಕ ಅಧಿಕಾರಿಗಳು ಈಗಾಗಲೇ ಜನರನ್ನು ಪರಿಷೆಗೆ ಬಾರದಂತೆ ಮನವಿ ಮಾಡಿಕೊಳ್ಳುತ್ತಿದ್ದಾರೆ. ಜಾತ್ರೆಗೂ ಮುನ್ನವೇ ಜನರು ಬಸವನಗುಡಿಯಲ್ಲಿ ಸೇರಲು ಆರಂಭಿಸುತ್ತಿದ್ದಾರೆ. ಮಳಿಗೆಗಳನ್ನು ಹಾಕಲು ಮುಂದಾಗಿದ್ದೇ ಆದರೆ, ಬಿಬಿಎಂಪಿ ಹಾಗೂ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ, ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದಿದ್ದಾರೆ.

ಜನದನಿಯ ಸಾರಥಿ
ವಾರ್ತಾ ಭಾರತಿ

| Date | 30-11-2020 |
| --- | --- |
| Page No | 2 |

# ಮರಗಳಿಗೆ ಮೊಳೆ ಹೊಡೆಯುವವರ ವಿರುದ್ಧ ಕ್ರಮಕ್ಕೆ ಒತ್ತಾಯ

ಬೆಂಗಳೂರು, ನ.29: ನಗರದಲ್ಲಿ ಮರಗಳಿಗೆ ಮೊಳೆ ಹಾಗೂ ಪಿನ್ ಹೊಡೆಯುವವರ ವಿರುದ್ಧ ಸಂಬಂಧಿಸಿದ ಅಧಿಕಾರಿಗಳು ಕಾನೂನು ಕ್ರಮ ಕೈಗೊಳ್ಳಬೇಕೆಂದು ಬಿ-ಪ್ಯಾಕ್ ಸಂಯೋಜಕ ರಾಘವೇಂದ್ರ ಪೂಜಾರಿ ಒತ್ತಾಯಿಸಿದ್ದಾರೆ.

ರವಿವಾರ ಬಿ-ಪ್ಯಾಕ್ ವತಿಯಿಂದ ನಗರದಲ್ಲಿ ಮರಗಳಿಗೆ ಹೊಡೆದಿರುವ ಪಿನ್ ಹಾಗೂ ಮೊಳೆಗಳನ್ನು ತೆಗೆದು, ಅದಕ್ಕೆ ಕನ್ನಡ ಬಾವುಟ ಹೊದಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಜನತೆಗೆ ಶುದ್ಧವಾದ ಗಾಳಿ ನೀಡುವಂತಹ ಮರಗಳಿಗೆ ಪಿನ್ ಮತ್ತು ಮೊಳೆ ಹೊಡೆಯುವುದು ಎಷ್ಟು ಸರಿಯೆಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ತಿಳಿಸಿದ್ದಾರೆ.

ಕೆಲವು ಉದ್ಯಮಿಗಳು ತಮ್ಮ ಸ್ವಾರ್ಥಕ್ಕಾಗಿ ತಮ್ಮ ವಸ್ತುಗಳನ್ನು ಪ್ರಚಾರ ಮಾಡುವುದಕ್ಕಾಗಿ ಮರಗಳಿಗೆ ಫಲಕಗಳನ್ನು ಅಂಟಿಸುತ್ತಿದ್ದಾರೆ. ಈ ಬಗ್ಗೆ ಸಾರ್ವಜನಿಕರು ನೋಡಿಯೂ ಮೌನ ವಹಿಸುವುದು ಸರಿಯಲ್ಲ. ಮುಂದಿನ ದಿನಗಳಲ್ಲಿ ಮರಗಳಿಗೆ ಮೊಳೆ ಹೊಡೆಯುವವರನ್ನು ತಡೆದು ಅವರಿಗೆ ಅರಿವು ಮೂಡಿಸಬೇಕೆಂದು ಸಲಹೆ ನೀಡಿದರು.

ಈ ವೇಳೆ ಸಿವಿಕ್ ಲೀಡರ್ಸ್ ವಾಸುದೇವ ಮೂರ್ತಿ, ಜಯರತ್ನ ಪುತಲಿಬಾಯಿ, ಮಾರುತಿ, ಕೃಷ್ಣ, ರಶ್ಮಿ, ರಾಣಿ ಹಾಗೂ ಕೇಶವ ಮತ್ತಿತರರು ಉಪಸ್ಥಿತರಿದ್ದರು.

ಜನದನಿಯ ಸಾರಥಿ
ವಾರ್ತಾ ಭಾರತಿ

| Date | 30-11-2020 |
| --- | --- |
| Page No | 2 |

# ಮಾರ್ಷಲ್‌ಗಳ ಮೇಲೆ ಸಾರ್ವಜನಿಕರ ದರ್ಪ

# ದೂರು ಸ್ವೀಕರಿಸದ ಪೊಲೀಸರು: ಆರೋಪ

ಬೆಂಗಳೂರು, ನ.29: ನಗರದಲ್ಲಿ ಮಾಸ್ಕ್ ಹಾಕದೇ ಓಡಾಡುವ ಸಾರ್ವಜನಿಕರಿಗೆ ಬಿಬಿಎಂಪಿ ಮಾರ್ಷಲ್‌ಗಳು ದಂಡ ವಿಧಿಸುತ್ತಿದ್ದಾರೆ. ಆದರೆ ಈ ರೀತಿ ದಂಡ ವಿಧಿಸುವ ಮಾರ್ಷಲ್‌ಗಳ ಮೇಲೆ ಸಾರ್ವಜನಿಕರೂ ನಿಂದಿಸಿ, ಹಲ್ಲೆ ಮಾಡಿದರೂ ಯಾವುದೇ ದೂರು ದಾಖಲಾಗಿಲ್ಲ. ಕಾರಣ ಮಾರ್ಷಲ್‌ಗಳ ದೂರನ್ನು ಪೊಲೀಸರು ಸ್ವೀಕರಿಸುತ್ತಿಲ್ಲ ಎಂದು ಮಾರ್ಷಲ್‌ಗಳು ಆರೋಪಿಸಿದ್ದಾರೆ.

ಕೊರೋನ ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಮಾಸ್ಕ್ ಧರಿಸದವರಿಗೆ ದಂಡ ವಿಧಿಸಲು ಬಿಬಿಎಂಪಿ ಮಾರ್ಷಲ್‌ಗಳನ್ನು ನೇಮಕ ಮಾಡಿದೆ. ಆದರೆ, ಮಾರ್ಷಲ್‌ಗಳು ಮಾಸ್ಕ್ ಹಾಕಿ ಎಂದು ಸಾರ್ವಜನಿಕರಿಗೆ ಹೇಳಿದರೆ, ಮಾರ್ಷಲ್‌ಗಳಿಗೆ ನಿಂದಿಸಿ, ಹಲ್ಲೆ ಮಾಡುತ್ತಿರುವ ಘಟನೆಗಳು ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿವೆ.

ಜಯನಗರದಲ್ಲಿ ಶನಿವಾರ ಸಂಜೆ ಮಾರ್ಷಲ್ ಒಬ್ಬರು ಮಹಿಳೆಯನ್ನು ಯಾಕೆ ಮಾಸ್ಕ್ ಹಾಕಿಲ್ಲ ಎಂದು ಪ್ರಶ್ನಿಸಿದ್ದಕ್ಕೆ, ಮಹಿಳೆ ಮಾರ್ಷಲ್‌ಗೆ ಮಾಸ್ಕ್ ಹಾಕಿದವರಿಗೇನು ಕೊರೋನ ಬರುವುದಿಲ್ವಾ ಎಂದು ಆವಾಜ್ ಹಾಕಿದ್ದಾರೆ.

ಈ ಬಗ್ಗೆ ಪೊಲೀಸರಿಗೆ ದೂರು ನೀಡಲು ಹೋದರೆ ಅವರು ಕೂಡ ದೂರು ಸ್ವೀಕಾರ ಮಾಡುತ್ತಿಲ್ಲ ಎಂಬುದು ಮಾರ್ಷಲ್‌ಗಳ ಆರೋಪವಾಗಿದೆ.

ಜಯ ಕಿರಣ
JAYAKIRANA MORNING DAILY ವಸ್ತುನಿಷ್ಠ ಸುದ್ದಿ-ಮಾಹಿತಿಗಳ ಪ್ರತಿಬಿಂಬ

| Date | 29-11-2020 |
|---|---|
| Page No | 1 |

# ಡಾ|| ರಾಜ್ ಘನತೆಗೆ ಅವಮಾನ: ಮೇಯರ್ ಮುತ್ತಣ್ಣನ ಪ್ರತಿಮೆ ಅನಾವರಣದಲ್ಲಿ ಅವಘಡ
## ಅಮೃತರಾಜ್ ಪುಂಡಾಟಿಕೆಯಿಂದ ಪಾಲಿಕೆ ಸಿಬ್ಬಂದಿ ಮೇಲೆ ಬೌನ್ಸರ್‌ಗಳಿಂದ ಅಮಾನುಷ ಹಲ್ಲೆ

ಬೆಂಗಳೂರು: ಇದು ರಾಜಧಾನಿ ಬೆಂಗಳೂರು ನಗರವೇ ತಲೆ ತಗ್ಗಿಸಬೇಕಾದ ವಿಷಯ. ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ನಟ ಸಾರ್ವಭೌಮ ಡಾ|| ರಾಜ್‌ಕುಮಾರ್‌ರವರ ನೆನಪಿಗಾಗಿ ಮೇಯರ್ ಮುತ್ತಣ್ಣ ಮಾದರಿಯ ಪ್ರತಿಮೆ ಅನಾವರಣಕ್ಕೆ ವೇದಿಕೆ ಸಿದ್ಧವಾಗಿತ್ತು. ಖುದ್ದು ವರನಟ ಡಾ|| ರಾಜ್ ಪುತ್ರ ಶಿವರಾಜ್ ಕುಮಾರ್ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಈಗಾಗಲೇ ಡಾ|| ರಾಜ್ ಗಾಜಿನ ಮನೆ ಪ್ರಾಂಗಣವನ್ನು ನಿರ್ಮಿಸಿ ಪಾಲಿಕೆಯ ಬಹುಮುಖ್ಯ ಕಾರ್ಯಕ್ರಮಗಳನ್ನು ಹಾಗೂ ಪ್ರತಿ ವರ್ಷದ ಕೆಂಪೇಗೌಡ ಪ್ರಶಸ್ತಿ ವಿತರಣೆಯನ್ನು ವಿಜೃಂಭಣೆಯಿಂದ ಮಾಡಲಾಗುತ್ತಿದೆ.



ಪ್ರತಿಮೆ ಅನಾವರಣದ ದೃಶ್ಯಗಳು

ಈ ಕಾರ್ಯಕ್ರಮಕ್ಕೆ ಬಿಬಿಎಂಪಿ ನೌಕರರ ಕನ್ನಡ ಸಂಘ ಕೇಂದ್ರ ಕಚೇರಿಯಲ್ಲಿ ಆಯೋಜಿಸಿದ್ದು ಅರಿಭಯಂಕರ ಅಮೃತರಾಜ್ ಪುಂಡಾಟಿಕೆಯ ಹಾಗೂ ಕೊನೆಯ ಪುಟಕ್ಕೆ

# ಅಮಾನುಷ ಹಲ್ಲೆ

ವೈಭವೀಕರಣದಿಂದ ಅವಘಡವೊಂದು ನಡೆದು ಹೋಗಿದ್ದು ಘನವೆತ್ತ ಪಾಲಿಕೆಯೇ ತಲೆತಗ್ಗಿಸುವಂತಾಗಿದೆ. ಪಾಲಿಕೆಯ ನಡಾವಳಿಗಳನ್ನು ಉಲ್ಲಂಘಿಸಿ ಆಯುಕ್ತರಿಂದ ಸಮ್ಮತಿ ಪಡೆಯದೆ 65ನೇ ವರ್ಷದ ಕನ್ನಡ ರಾಜ್ಯೋತ್ಸವ ಹಾಗೂ ನಗರ ದೇವತೆ ಅಣ್ಣಮ್ಮನ ಜಂಟಿ ಸಮಾರಂಭ ವಿವಾದದಿಂದಲೇ ಅಂತ್ಯವಾಯಿತು.

ಪಾಲಿಕೆ ಆವರಣದಲ್ಲಿ ಬಾಡಿಗೆ ರೌಡಿಗಳಂತಹ ಬೌನ್ಸರ್‌ಗಳನ್ನು ಕರೆಸಿ ಕಾರ್ಯಕ್ರಮಕ್ಕೆ ಸಾರ್ವಜನಿಕರೂ ಹಾಗೂ ಪಾಲಿಕೆ ನೌಕರರನ್ನೇ ಹೊರಗಿಡಲಾಗಿತ್ತು. ಸರಳತೆ ಹಾಗೂ ಸಜ್ಜನಿಕೆಗೆ ಹೆಸರಾದ ಡಾ|| ರಾಜ್ ಕನ್ನಡ ಭಾಷೆ ಹಾಗೂ ನಾಡು–ನುಡಿಯ ವಿಚಾರದಲ್ಲಿ ಮಾದರಿಯ ನಟ. ಆದರೆ ಅವರ ಪುತ್ಥಳಿಯ ಅನಾವರಣ ಸಮಯದಲ್ಲೇ ಇಂತಹ ಪುಂಡಾಟಗಳು ದರ್ಪಗಳು ಎಷ್ಟು ಸರಿ? ಅದು ಪಾಲಿಕೆಯ ಆಯುಕ್ತರ ಕಚೇರಿಯ ಸಹಾಯಕ ಸಿಬ್ಬಂದಿಗೆ ಹಿಗ್ಗಾಮುಗ್ಗಾ ಥಳಿಸಿಬಿಟ್ಟರೆ, ಅವಾಚ್ಯ ಶಬ್ದಗಳಿಂದ ನಿಂದಿಸಿ, ತಳ್ಳಾಡಿದರೆ ಅದು ಕಾರ್ಯಕ್ರಮಕ್ಕೆ ಸಾರ್ಥಕತೆ ಎನಿಸುತ್ತದೆಯೇ?

ಇಂತಹ ಗಂಭೀರ ಪರಿಸ್ಥಿತಿ ಬೆನ್ನಲ್ಲೇ ದಿಗ್ಭ್ರಾಂತರಾದ ಹಿರಿಯ ಅಧಿಕಾರಿಗಳು ಹಾಗೂ ಆಯುಕ್ತರು ಪರಿಸ್ಥಿತಿಯನ್ನು ತಿಳಿಗೊಳಿಸಲು ಪ್ರಯತ್ನಿಸಿದರೂ ಘಟನೆ ಗಂಭೀರ ಸ್ಥಿತಿಯತ್ತ ತಿರುಗುತ್ತಿದ್ದಂತೆ ಬೌನ್ಸರ್‌ಗಳೆಲ್ಲ ದಿಕ್ಕಾಪಾಲಾಗಿ ಚದುರಿ ಹೋದರು. ಇದನ್ನೆಲ್ಲ ಆಯೋಜಿಸಿದ್ದ ಅಮೃತರಾಜ್ ಇದರ ನೈತಿಕ ಹೊಣೆ ಹೊರಬೇಕಲ್ಲವೇ? ಈಗಾಗಲೇ ಪಾಲಿಕೆ ನೌಕರರಲ್ಲಿ ಬಣ ರಾಜಕಾರಣಗಳು ಹುಟ್ಟಿಕೊಂಡು ಹೇಸಿಗೆ ಹುಟ್ಟಿಸುತ್ತಿವೆ. ಅದರ ನಡುವೆ ಇಂತಹ ಅವಘಡ ಪಾಲಿಕೆ ಇತಿಹಾಸದಲ್ಲೇ ಕಪ್ಪು ಚುಕ್ಕೆ. ಡಾ||ರಾಜ್ ತಮಗೆ ಸಕಲ ಸನ್ಮಾನಗಳೊಂದಿಗೆ ಇಂತಹ ಹೇಯ ಘಟನೆಗೆ ಬೆಂಗಳೂರು ನಿಮ್ಮಲ್ಲಿ ಕ್ಷಮೆ ಕೋರುತ್ತದೆ.

ಸಂಜೆವಾಣಿ
1982

| Date | 29-11-2020 |
| --- | --- |
| Page No | 5 |



ಸದಾ ಸಂಚಾರ ದಟ್ಟಣೆಯಿಂದ ಇರುತ್ತಿದ್ದ ಚರ್ಚ್ ಸ್ಟ್ರೀಟ್ ರಸ್ತೆಯನ್ನು ಎರಡನೇ ಶನಿವಾರ ಮತ್ತು ಭಾನುವಾರಗಳಂದು ಜೀರೋ ಟ್ರಾಫಿಕ್ ದಿನವಾಗಿದ್ದು, ಸಾರ್ವಜನಿಕರು ಶ್ವಾನದೊಂದಿಗೆ ನಿರಾಳವಾಗಿ ನಡೆದುಕೊಂಡು ಹೋಗುತ್ತಿರುವುದು.

ಸಂಜೆವಾಣಿ
1982

| Date | 29-11-2020 |
| --- | --- |
| Page No | 7 |




ಕೊರೊನಾ ಭೀತಿ ಹಿನ್ನೆಲೆಯಲ್ಲಿ ನಗರದ ಸಿಟಿ ಮಾರುಕಟ್ಟೆ ಬಳಿ ಸಾರ್ವಜನಿಕರಿಗೆ ವೈದ್ಯರು, ವಾರಿಯರ್ಸ್‌ಗಳು, ಕೋವಿಡ್ ಪರೀಕ್ಷೆ ಮಾಡುತ್ತಿರುವುದು.

ಈ ಸಂಜೆ

| Date | 29-11-2020 |
| --- | --- |
| Page No | 6 |

# ಗೊರಗುಂಟೆಪಾಳ್ಯದಲ್ಲಿ ಸಿಗ್ನಲ್ ಫ್ರೀ ರಸ್ತೆ



**ರಾಜರಾಜೇಶ್ವರಿನಗರ, ನ.29 –** ಆರ್.ಆರ್.ನಗರ ಸರ್ವಾಂಗೀಣ ಅಭಿವೃದ್ಧಿ ದೃಷ್ಟಿಯಿಂದ ಕ್ಷೇತ್ರದಲ್ಲಿ ಶಾಶ್ವತ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಶಾಸಕ ಮುನಿರತ್ನ ತಿಳಿಸಿದರು.

ಕ್ಷೇತ್ರ ವ್ಯಾಪ್ತಿಯ ಗೊರಗುಂಟೆಪಾಳ್ಯದಲ್ಲಿ ಕೆಳ ಹಾಗೂ ಮೇಲು ಸೇತುವೆ ನಿರ್ಮಿಸಿ ತುಮಕೂರು ರಸ್ತೆಯನ್ನು ಸಿಗ್ನಲ್ ಫ್ರೀ ರಯಾಗಿಸುವ ಸಂಬಂಧ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ದಿನೇ ದಿನೇ ವಾಹನ ದಟ್ಟಣೆ ವಿಪರೀತವಾಗುತ್ತಿದೆ. ಸಿಗ್ನಲ್ ದಾಟಿ ಸಾಗಲು ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಸಕಾಲದಲ್ಲಿ ಕೆಲಸ ಕಾರ್ಯ ಆಸ್ಪತ್ರೆಗೆ ಹೋಗಲು ನಾಗರಿಕರು ನಿತ್ಯ ಪರದಾಡುತ್ತಿದ್ದಾರೆ. ಈ ಸಂಬಂಧ ಗೊರಗುಂಟೆಪಾಳ್ಯ ವೃತ್ತದಲ್ಲಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ಸಲುವಾಗಿ ಕೆಳ ಹಾಗೂ ಮೇಲು ಸೇತುವೆ ನಿರ್ಮಾಣದ ಬಗ್ಗೆ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಲಾಯಿತು ಎಂದರು.